† ಶ್ರೀ ಎನ್. ರಾಚಯ್ಯ (ವ್ಯವಸಾಯ ಹಾಗು ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು).—ಸ್ವಾಮಿ, ಮಾನ್ಯಸದಸ್ಯರು ಅನೇಕರು ಸಾಮಾನ್ಯವಾದ ಚರ್ಚೆಯಲ್ಲಿ ಮಾತ ನಾಡುತ್ತಾ ಒಳ್ಳೆ ಉಪಯುಕ್ತವಾದ ಸಲಹೆಗಳನ್ನು ವ್ಯವಸಾಯ ಇಲಾಖೆಯ ವಿಚಾರದಲ್ಲಿ ಮಾಡಿ ದ್ದಾರೆ. ಅದಕ್ಕಾಗಿ ಎಲ್ಲಾ ಮಾನ್ಯ ಸದಸ್ಯರಿಗೂ ಯಾರು ಯಾರು ಈ ಚರ್ಚೆಯಲ್ಲಿ ಭಾಗವಹಿಸಿ ವ್ಯವಸಾಯ ಇಲಾಖೆ, ಮೀನುಗಾರಿಕೆ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಪ್ರಾಣಿಸಂಪತ್ತು ಬೆಳೆಸತಕ್ಕಂಥ ಇಲಾಖೆ ವಿಚಾರದಲ್ಲಿ ಸೂಕ್ತ ಸಲಹೆ ಕೊಟ್ಟು ಬೆಂಬಲ ನೀಡಿದ್ದಾರೋ ಅವರಿಗೆಲ್ಲಾ ನಾನು ವಂದನೆಗಳನ್ನು ಅರ್ಪಿಸುತ್ತೇನೆ. ಈ ಸಂದರ್ಭದಲ್ಲಿ ಶ್ರೀ ದೊಡ್ಡಮೇಟಿಯವರು ಶ್ರೀ ಶಿವಪ್ಪನವರು, ಶ್ರೀ ದೇವರಾಜ ಅರಸರವರು ಶ್ರೀ ಹುಚ್ಚಮಾಸ್ತಿಗೌಡರು ಮುಂತಾದ ಮಾನ್ಯ ಸದಸ್ಯರು ಅನೇಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಇನ್ನು ಹೆಚ್ಚಾಗಿ ಉತ್ಪತ್ತಿ ಮಾಡಬೇಕಾದರೆ ರಿಸರ್ಚ್ ಕೆಲಸ ನಡೆಸಲು ಸರಕಾರ ಗಮನ ಕೊಟ್ಟಿಲ್ಲ ಎಂದು ಮತ್ತು ಸಾಕಷ್ಟು ಆಹಾರ ಉತ್ಪತ್ತಿ ಮಾಡತಕ್ಕಂಥ ಪ್ರಯತ್ನ ನಡೆದಿಲ್ಲವೆಂದೂ ಸರ್ವೇಸಾಮಾನ್ಯವಾದ ಟೀಕೆ ಮಾಡಿದ್ದಾರೆ. ಹಾಗೆ ಮಾಡುವಾಗ ಸರ್ಕಾರ ಮತ್ತು ವ್ಯವಸಾಯ ಶಾಖೆ ಅಧಿಕಾರವರ್ಗ ಒಂದನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಮಾನ್ಯ ಸಭೆಯವರು ಏನೊಂದು ನಿರ್ದಿಷ್ಟವಾದ ಆಹಾರೋತ್ಪಾದನೆಯ target.........

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇವೊತ್ತು ನಮ್ಮ ಈ ಸಭೆಯಲ್ಲಿ ಬಡ್ಜೆಟ್ ಮೇಲಿನ ಚರ್ಚೆ ಮತ್ತು ಶಾಸನ ರಚನೆಗೆ ಸಂಬಂಧಪಟ್ಟ ವಿಷಯ, ಹೀಗೆ ಎರಡು ಬಾಬುಗಳಿವೆ. ಇವೊತ್ತು ಪೂರ್ತಿ ಬಡ್ಜೆಟ್ ಮೇಲಿನ ಚರ್ಚೆ ನಡೆಯುತ್ತದೆಯೇ ಅಥವಾ ಮಸೂದೆಯನ್ನು ತೆಗೆದು ಕೊಳ್ಳುತ್ತೀರಾ ಎಂದು ತಿಳಿಸಬಯಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಇವೊತ್ತು ಪೂರ್ತಿ ಬಡ್ಜೆಟ್ ಮೇಲಿನ ಚರ್ಚೆ ನಡೆಯುತ್ತದೆ. ಮಸೂದೆಯನ್ನು ಇವೊತ್ತು ತೆಗೆದುಕೊಳ್ಳಲು ಆಗುವುದಿಲ್ಲ.

ಶ್ರೀ ಎನ್. ರಾಚಯ್ಯ.—ನಿರ್ದಿಷ್ಟವಾದ ಉತ್ಪಾದನೆ ಗುರಿಯನ್ನು ಎರಡು ಯೋಜನೆ ಗಳಲ್ಲಿಯೂ ಮುಟ್ಟಿದ್ದೇವೆ. ಅದರಲ್ಲಿಯೂ ಹೆಚ್ಚಿಗೆ ಸಾಧಿಸಿದ್ದೇವೆಂದು ಬಹಳ ಸಂತೋಷದಿಂದ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗು ತ್ತದೆ. ವ್ಯವಸಾಯದ ಉತ್ಪಾದನೆಯಾಗಬೇಕು, ಮತ್ತು ಭೂಮಿಯ ಮೇಲೆ ಅವಲಂಬಿಸಿರತಕ್ಕ ಜನಸಂಖ್ಯೆ ಕಡಮೆಯಾಗಬೇಕು, ಇದು ಸರ್ಕಾರದ ಗಮನದಲ್ಲಿ ಬಹಳ ತೀವ್ರತೆಯಿಂದ ಇದೆ. ರಾಜ್ಯದಲ್ಲಿ ಸುಮಾರು 244 ಲಕ್ಷ ಎಕರೆ ಜಮೀನನ್ನು ನಾವು ಇವೊತ್ತು ಆಬಾದು ಮಾಡುತ್ತಿದ್ದೇವೆ. ಮತ್ತು 36 ಲಕ್ಷ ಎಕರೆ ಜಮೀನು ಆಬಾದು ಮಾಡಲು ಯೋಗ್ಯವಾಗಿದ್ದು ಪಾಳುಬಿದ್ದಿದೆ (fallow ಆಗಿದೆ). ಒಟ್ಟು 280 ಲಕ್ಷ ಎಕರೆಗಳಷ್ಟು ಜಮೀನು ವ್ಯವಸಾಯ ಮಾಡಲು ಯೋಗ್ಯ ವಾಗಿದೆ. ಇದರಲ್ಲಿ 17 ಲಕ್ಷ ಎಕರೆ ಜಮೀನಿನಲ್ಲಿ ನೀರಾವರಿ ಸಹಾಯದಿಂದ ಆಬಾದು ಮಾಡು ತ್ತಿದ್ದೇವೆ. ಇತರ ಕೆಲವು ರಾಜ್ಯಗಳಿಗೆ ಹೋಲಿಸಿದರೆ ನೀರಾವರಿಯಲ್ಲಿ ನಮಗೆ ವಿಶೇಷವಾದ ನೀರಿನ ಸಂಪತ್ತಿದ್ದರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿಯನ್ನು ನಾವು ಮಾಡಲು ಈವರೆಗೂ ಆಗಿಲ್ಲ ಮತ್ತು ಆಗಿರತಕ್ಕ ಕೆಲಸವನ್ನು ಬಹಳ ಶ್ರದ್ಧೆಯಿಂದ ಬಹಳ ಹೆಚ್ಚಿನ ಪ್ರಮಾಣದಲ್ಲಿ ಸ್ವರಾಜ್ಯ ಬಂದಾಗಿನಿಂದ ತೀವ್ರತೆಯಿಂದ ಸರ್ಕಾರ ಮಾಡಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ತುಂಗಭದ್ರ, ನುಗು, ಭದ್ರ, ಮಲಪ್ರಭ, ಘಟಪ್ರಭ, ಮುಂತಾದ ದೊಡ್ಡ ದೊಡ್ಡ ಕಟ್ಟೆಗಳನ್ನು ಕಟ್ಟುವ ಪ್ರದೇಶಗಳಲ್ಲಿ ನಮ್ಮ ರಾಜ್ಯದಲ್ಲಿ ಇತರ ರಾಜ್ಯಗಳಿಗೆ ಕಡಮೆಯಿಲ್ಲದ ರೀತಿಯಲ್ಲಿ ನಾವು ನೀರಾವರಿಯನ್ನು ಮಾಡಿ ಇನ್ನೂ ಹೆಚ್ಚು ಪ್ರಮಾಣದಲ್ಲಿ ಆಹಾರಪದಾರ್ಥಗಳನ್ನು ಉತ್ಪಾದನೆ ಮಾಡುವುದಕ್ಕೆ ಸರ್ಕಾರ ತೀವ್ರವಾಗಿ ಗಮನ ಕೊಟ್ಟಿದೆ. ಮೂರನೆಯ ಯೋಜನೆಯಲ್ಲಿಯೂ ಇದಕ್ಕೆ ಗಮನವನ್ನು ಕೊಡಲಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 97 ಸಾವಿರ ಟನ್ ಉತ್ಪಾದನೆ ಮಾಡಬೇಕೆಂದಿತ್ತು.

(ಶ್ರೀ ಎನ್. ರಾಚಯ್ಯ)

ಆದರೆ ನಾವು 2·15 ಲಕ್ಷ ಟನ್ ಆಹಾರ ಪದಾರ್ಥಗಳನ್ನು ಬೆಳೆದಿದ್ದೇವೆ. ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ 5·1 ಲಕ್ಷ ಟನ್ ಉತ್ಪಾದನೆ ಮಾಡಬೇಕೆಂಬ ಗುರಿಯನ್ನು ನಿಗದಿ ಮಾಡಲಾಗಿತ್ತು. ಉತ್ಪಾದನೆ ಮಾಡಿರುವುದು 6 ಲಕ್ಷ ಟನ್ ಎಂದರೆ ಸುಮಾರು ಒಂದು ಲಕ್ಷ ಟನ್ ಆಹಾರ ಪದಾರ್ಥಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆ ಪೂರೈಸುವುದರೊಳಗೆ ಈ ತಿಂಗಳ ಕೊನೆಯೊಳಗೆ ನಾವು ಬೆಳೆದಂತಾಗುತ್ತದೆ. ಮೂರನೆಯ ಯೋಜನೆಯಲ್ಲಿ ನಾವು ಹತ್ತು ಲಕ್ಷ ಟನ್ ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡಬೇಕೆಂದು ಸರ್ಕಾರದ ನಿರೀಕ್ಷೆ ಇದೆ. ಇದರಲ್ಲಿ ಸರ್ಕಾರ ತಾನು ಮಾಡಬೇಕಾದಂಥ ಜವಾಬ್ದಾರಿಯನ್ನು, ಹೊರಬೇಕಾದ ಜವಾಬ್ದಾರಿಯನ್ನು ಮತ್ತು ಯಾವ ಕ್ರಮ ತೆಗೆದುಕೊಳ್ಳಬಹುದಾಗಿತ್ತೋ ಅದನ್ನು ಬಹಳ ನಿಷ್ಠೆಯಿಂದ ದೇಶದ ಹಾಗೂ ರಾಜ್ಯದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಹೆಚ್ಚಿನ ಶ್ರದ್ಧೆಯಿಂದ ಸಂಬಂಧಪಟ್ಟ ಇಲಾಖೆ ಕೆಲಸಮಾಡಿದೆಯೆಂದು ಬಹಳ ಸಂತೋಷದಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ಆಹಾರ ಪದಾರ್ಥಗಳ ಉತ್ಪಾದನೆಯ ಕ್ಷೇತ್ರದಲ್ಲಿರುವ ಕೆಲವು ಅನಿವಾರ್ಯಗಳನ್ನು ಮಾನ್ಯ ಸಭೆಯವರ ಗಮನಕ್ಕೆ ತಂದರೆ ಮೆಚ್ಚುತ್ತೀರೆಂದು ಭಾವಿಸುತ್ತೇನೆ. ನಮ್ಮ ಸಂಸ್ಥಾನಕ್ಕೆ ಈ ಹೊತ್ತು ಸುಮಾರು 41,54,000 ಟನ್ ಆಹಾರ ಪದಾರ್ಥಗಳು ಬೇಕು. ಆದರೆ ನಾವು ಉತ್ಪಾದನೆ ಮಾಡುತ್ತಿರುವುದು 38,50,000 ಟನ್‌ನಷ್ಟು ಮಾತ್ರ. ಮೂರನೆಯ ಯೋಜನೆಯಲ್ಲಿ ನಮಗೆ 48,50,000 ಟನ್ ಆಹಾರ ಪದಾರ್ಥಗಳು ಬೇಕು. ಸ್ವಾವಲಂಬನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಇಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳ ಉತ್ಪಾದನೆಯನ್ನು ಮೂರನೆಯ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಧಿಸಬೇಕು ಎನ್ನುವುದು ಸರ್ಕಾರದ ನಿರ್ದಿಷ್ಟ ನೀತಿಯಾಗಿದೆ. ಆ ಗುರಿಯನ್ನು ಸಾಧಿಸುತ್ತೇವೆ. ಅದಕ್ಕೆ ಹೆಚ್ಚಿನ ಅನುಕೂಲಗಳೂ ಇವೆ ಎನ್ನುವುದನ್ನೂ ಕೂಡ ತಮಗೆ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಬಿ. ಚಾಮಯ್ಯ.—ಮಾಡಿದ್ದೇವೆಂದು ಹೇಳುತ್ತೀರಲ್ಲ !

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರು ಈ ದಿನ ಊಟಮಾಡುತ್ತ ಇಲ್ಲ...(ದೀರ್ಘನಗು).

ತಮಗೆ ಸಮೃದ್ಧಿಯಾಗಿ ಊಟದ ಪದಾರ್ಥಗಳನ್ನು ಒದಗಿಸುತ್ತಿದ್ದೇವೆ. ಎಲ್ಲರೂ ಸಂತೋಷವಾಗಿದ್ದಾರೆ. ನಿಮಗೆ ಸಮಾಧಾನವಾದಮೇಲೆ ದೇಶಕ್ಕೆಲ್ಲ ಸಮಾಧಾನ ಎಂದು ಹೇಳುತ್ತೇನೆ.

ಶ್ರೀ ಬಿ. ಚಾಮಯ್ಯ.—ನಿಮಗೆ ಸಮಾಧಾನವಾದರೆ ದೇಶಕ್ಕೆಲ್ಲ ಸಮಾಧಾನವಾಗಿದೆ ಎಂದು ಅಭಿಪ್ರಾಯವೇ?

ಶ್ರೀ ಎನ್. ರಾಚಯ್ಯ.—ಅವರಿಗೆ ಹೆಚ್ಚಿನ ಆಹಾರ ಪದಾರ್ಥಗಳು ಸಿಕ್ಕುತ್ತಿರುವುದರಿಂದ ಬಹಳ ಚುರುಕಾಗಿದ್ದಾರೆ.

ನಮಗೆ ಒಂದು ವರ್ಷಕ್ಕೆ ಬೇಕಾಗಿರತಕ್ಕ ಕೃತಕ ಗೊಬ್ಬರ ಸುಮಾರು ಮೂರು ಲಕ್ಷ ಟನ್. ಕೇಂದ್ರ ಸರ್ಕಾರಕ್ಕೆ ಒಂದೆರಡು ಲಕ್ಷ ಟನ್ ಒಂದು ವರ್ಷಕ್ಕೆ ಬೇಕು ಎಂದು ಬೇಡಿಕೆಗಳನ್ನು ಕಳಿಸಿದ್ದೇವೆ. ಆದರೆ ನಮಗೆ 30ರಿಂದ 40 ಸಾವಿರ ಟನ್ ಗೊಬ್ಬರ ಮಾತ್ರ ಕೇಂದ್ರದಿಂದ ಒದಗುತ್ತಿದೆ. ಹೀಗಿರುವಾಗ ಅದನ್ನು ಸಮಂಜಸವಾಗಿ ಹಂಚಬೇಕೆಂಬ ಉದ್ದೇಶದಿಂದ ಎಲ್ಲ ಹಳ್ಳಿಗಳು ತಾಲ್ಲೂಕುಗಳು ಮತ್ತು ಜಿಲ್ಲೆಗಳಿಗೂ ಸಹ ಆಯಾಯ ಜಿಲ್ಲೆಯ ಜನಸಂಖ್ಯೆಗೆ ಅನುಸಾರವಾಗಿ ಮತ್ತು ಆ ಪ್ರದೇಶದ ಅವಶ್ಯಕತೆಗಳಿಗನುಸಾರವಾಗಿ ಕೊಡುತ್ತಿದ್ದೇವೆ. ಈ ಸಭೆಯ ಮಾನ್ಯ ಸದಸ್ಯರ ಒತ್ತಾಯದಮೇಲೆ ಮತ್ತು ಆಶಯದ ಪ್ರಕಾರವಾಗಿ ಸಹಕಾರ ಸಂಘಗಳ ಮೂಲಕ ಮಾತ್ರ ಕಬ್ಬಿಣ ಮತ್ತು ಗೊಬ್ಬರ ಇವನ್ನು ಹಂಚಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡು ಕಳೆದ ವರ್ಷದಿಂದ ಆರೀತಿ ಮಾಡುತ್ತಿದ್ದೇವೆನ್ನುವುದು ತಮಗೆಲ್ಲರಿಗೂ ಗೊತ್ತೇ ಇದೆ.

ಶ್ರೀ ಎ. ಎಂ. ಬಸವೇಗೌಡ.—ಕೇಂದ್ರದಿಂದ ಬರುವ 30-40 ಸಾವಿರ ಟನ್ ಗೊಬ್ಬರ ವನ್ನು ಸಕಾಲದಲ್ಲಿ ಏಕೆ ಒದಗಿಸುತ್ತಿಲ್ಲ?

ಶ್ರೀ ಎನ್. ರಾಚಯ್ಯ.—ಸಕಾಲದಲ್ಲಿ ಕಳಿಸುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಕೆಲವು ಕಡೆ ಸಹಕಾರ ಸಂಘಗಳಿಗೆ ನಾವು ಅಲಾಟ್ ಮಾಡಿದರೂ ಕೂಡ, ಹಣದ ಅಭಾವದಿಂದ ಅಥವಾ ಸಾರಿ ಗೆಯ ಅನಾನುಕೂಲತೆಗಳಿಂದ ಅವರು ತೆಗೆದುಕೊಳ್ಳುತ್ತಾ ಇಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ರೈತರೇ ಮುಂದೆ ಬಂದು ತೆಗೆದುಕೊಳ್ಳುತ್ತಾ ಇಲ್ಲ ಎಂದು ನಾನು ಪ್ರವಾಸಮಾಡುವಾಗ ಸಹ ಕಾರ ಸಂಘಗಳವರು ತಿಳಿಸಿದ್ದಾರೆ. ಸರ್ಕಾರ ವಿತರಣೆಯಿಂದ ಸಕಾಲಕ್ಕೆ ಗೊಬ್ಬರ ಹಂಚುವ ವ್ಯವಸ್ಥೆಯನ್ನು ಮಾಡಿದೆ. ಆದರೆ ಅಲ್ಲಿ ಇಲ್ಲಿ ಕೆಲವು ಲೋಪದೋಷಗಳಿರಬಹುದು. ಅವು ನನ್ನ ಗಮನಕ್ಕೆ ಬಂದಿಲ್ಲ.

4-00 P.M.

ಹೀಗೆ ಲೋಪ ದೋಷಗಳಿವೆ ಎನ್ನುವುದು ನನ್ನ ಗಮನಕ್ಕೆ ಬಂದರೆ ಅದನ್ನು ಸಮಂಜಸ ವಾಗುವ ರೀತಿಯಲ್ಲಿ ಸರಕಾರದವರು ಸಹಾಯ ಮಾಡುತ್ತಾರೆ ಎನ್ನುವ ಭರವಸೆಯನ್ನು ಶ್ರೀ ಮಾನ್ ಬಸವೇಗೌಡರಿಗೆ ಇಲ್ಲಿ ಕೊಡುತ್ತೇನೆ.

ಇವೊತ್ತಿನ ದಿವಸ ಕಬ್ಬಿಣ ನಮಗೆ ಬೇಕಾಗಿರತಕ್ಕದ್ದು 36,000 ಟನ್ನುಗಳು. ಇದನ್ನು ನಮ್ಮ ರಾಜ್ಯದಲ್ಲಿರುವ ವ್ಯವಸಾಯಗಾರರುಗಳಿಗೆ ಒದಗಿಸಬೇಕು. ನಮಗೆ ಕೇಂದ್ರಸರಕಾರದಿಂದ ಒದಗುತ್ತಿರುವುದು ಸುಮಾರು 3 ಅಥವಾ 4 ಸಾವಿರ ಟನ್ನುಗಳಷ್ಟು ಮಾತ್ರ. ಸಾಮಾನ್ಯವಾಗಿ ವ್ಯವಸಾಯ ಮಾಡುವರಿಗೆ ಬೇಕಾದಂತಹ ಗೊಬ್ಬರ, ಕಬ್ಬಿಣ ಕೊಡಬೇಕು ಎಂದು ಅಂದಾಜು ಮಾಡಿಕೊಂಡಿದ್ದರೂ ಅದನ್ನು ನಾವು ಇನ್ನೂ ಒದಗಿಸುವುದಕ್ಕೆ ಅವಕಾಶವಿಲ್ಲವಾಗಿದೆ. ಏಕೆಂದರೆ ಸಾಕಾದಷ್ಟು ಪ್ರಮಾಣದಲ್ಲಿ ನಮಗೆ ಕಬ್ಬಿಣ ಒದಗುತ್ತಿಲ್ಲ. ಇದರಿಂದಾಗಿ ಆಹಾರ ಪದಾರ್ಥ ಗಳನ್ನು ಎಷ್ಟು ಉತ್ಪಾದನೆ ಮಾಡಬೇಕೆಂದು ಯೋಜನೆಯಲ್ಲಿಟ್ಟುಕೊಂಡಿದ್ದರೂ ಅಷ್ಟು ಉತ್ಪತ್ತಿಯನ್ನು ಮಾಡಲು ಇನ್ನೂ ಸಾಧ್ಯವಾಗಿಲ್ಲ. ನಮ್ಮ ಭಾರತ ದೇಶದಲ್ಲಿ ಭಿಲೈ, ರೂರ್ಕೆಲಾ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳು ಇನ್ನೂ ಹೆಚ್ಚಿನ ಉತ್ಪನ್ನವನ್ನು ಮಾಡುತ್ತಿವೆ. ಇದರಿಂದ ಕಬ್ಬಿಣದ ಉತ್ಪಾದನೆ ಹೆಚ್ಚಾಗಿ, ಕಬ್ಬಿಣದ ಸರಬರಾಜು ಮತ್ತು ಅದನ್ನು ಹಂಚ ತಕ್ಕ ವ್ಯವಸ್ಥೆ ಬಹಳ ಸಮರ್ಪಕವಾಗಿ ಮಾಡಬೇಕೆನ್ನುವ ಆಸೆ ರಾಜ್ಯ ಸರಕಾರಕ್ಕಿದೆ.

ಶ್ರೀ ಕೆ. ವಿ. ಬೈರೇಗೌಡ.— ಎಷ್ಟು ಕಬ್ಬಿಣ ಒದಗುತ್ತಿದೆಯೋ ಆ ಕಬ್ಬಿಣ ಸಕಾಲದಲ್ಲಿ ವ್ಯವಸಾಯಗಾರನಿಗೆ ಒದಗುತ್ತಿಲ್ಲ. ಮತ್ತು ವ್ಯವಸಾಯದ ಸೀಸನ್ನಿನಲ್ಲಿ ಬರುತ್ತಿಲ್ಲ ಎನ್ನುವ ತೊಂದರೆಯೂ ಇದೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎನ್. ರಾಚಯ್ಯ.— ಗೊಬ್ಬರದ ವಿಚಾರದಲ್ಲಿ ರೈತನಿಗೆ ಗೊಬ್ಬರ ಅವನು ವ್ಯವಸಾಯ ಮಾಡುವ ಕಾಲಕ್ಕೆ ಹದಿನೈದು ದಿವಸಗಳಿಗೆ ಮುಂಚಿತವಾಗಿ ಹಂಚಿದರೆ ಅನುಕೂಲವಾಗುತ್ತದೆ ಎಂದು ಮುಂಜಾಗ್ರತೆ ವಹಿಸಿ ಇವರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಈ ವರ್ಷ ಮಾಡಲು ಕ್ರಮವನ್ನು ತೆಗೆದುಕೊಂಡರೂ ಹೆಚ್ಚಿನ ಉಪಯೋಗವಾಗಲಿಲ್ಲ. ಮುಂದಿನ ವರ್ಷ ಇದನ್ನು ಇನ್ನೂ ಹೆಚ್ಚು ತೀವ್ರದಿಂದ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ಎಂದು ಇಲ್ಲಿ ನಾನು ಹೇಳುತ್ತೇನೆ. ಕಬ್ಬಿಣ ನಮಗೆ ಬೇಕಾಗಿರತಕ್ಕದ್ದು ಸುಮಾರು 36,000 ಟನ್ನುಗಳಷ್ಟು. ಇದರಲ್ಲಿ ಕೇಂದ್ರ ಸರಕಾರದಿಂದ ಸುಮಾರು ಮೂರು ಅಥವಾ ನಾಲ್ಕು ಸಾವಿರ ಟನ್ನುಗಳು ಬರುತ್ತಾ ಇರುವುದರಿಂದ ಈಗ ಭಿಲೈ ಮತ್ತು ರೂರ್ಕೆಲಾ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಕೇಂದ್ರ ಸರಕಾರದವರು ಸ್ಥಾಪನೆ ಮಾಡಿ ಇನ್ನೂ ಹೆಚ್ಚಿನ ಉತ್ಪನ್ನವನ್ನು ಮಾಡುವ ಸ್ಥಿತಿಯಲ್ಲಿದ್ದಾರೆ. ನಮ್ಮ ಭದ್ರಾವತಿ ಕಾರ್ಖಾನೆಯಲ್ಲೂ ಕೂಡ ಅದನ್ನು ವಿಸ್ತರಣೆ ಮಾಡಬೇಕೆಂದು ಯೋಚನೆ ಮಾಡಿ ಅದರ ಮೂಲಕ ಹೆಚ್ಚಿನ ಕಬ್ಬಿಣವನ್ನೂ ಉತ್ಪತ್ತಿ ಮಾಡುವ ಅವಕಾಶವೂ ಇದೆ. ಮಾನ್ಯ ಸದಸ್ಯರಿಗೆ ನಾನು ಹೇಳತಕ್ಕದ್ದು ಕೇವಲ ಇನ್ನೂ ಎರಡು-ಮೂರು

ಶ್ರೀ ಎಸ್. ರಾಚಯ್ಯ)

ವರ್ಷಗಳಲ್ಲಿ ಎಂದರೆ ಮೂರನೆ ಪಂಚವಾರ್ಷಿಕ ಯೋಜನೆಯೊಳಗೆ ಎಂದರೆ ಅದರ ಮಧ್ಯಭಾಗದಲ್ಲಿ ಇನ್ನೂ ಸಾಕಾದಷ್ಟು ಕಬ್ಬಿಣ ರೈತರಿಗೆ ಕೊಡತಕ್ಕ ಭರವಸೆ ನಿಮ್ಮ ಸರಕಾರಕ್ಕಿದೆ ಎಂದು ಇಲ್ಲಿ ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.— ಕೇಂದ್ರ ಸರಕಾರದವರು ಪ್ರತಿಯೊಂದು ರಾಜ್ಯ ಸರಕಾರಗಳಿಗೂ ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಬೇಕೆಂದು ಹೇಳುತ್ತಿರುವವರು ಅವರೇಕೆ ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ಕೊಡುವ ಜವಬ್ದಾರಿಯನ್ನು ಹೊತ್ತು ಕೊಳ್ಳುವುದಿಲ್ಲ.?

ಶ್ರೀ ಎಸ್ ರಾಚಯ್ಯ.— ಈ ಜವಾಬುದಾರಿ ರಾಜ್ಯ ಸರಕಾರಕ್ಕೂ ಇದೆ, ಕೇಂದ್ರ ಸರಕಾರಕ್ಕೂ ಇದೆ. ಅಷ್ಟು ತೀವ್ರತೆ ಇರುವುದರಿಂದಲೇ ಇನ್ನೂ ಹೆಚ್ಚು ಹೆಚ್ಚಾಗಿ ಕಬ್ಬಿಣದ ಉತ್ಪಾದನೆಯನ್ನು ಮಾಡಲು ದೊಡ್ಡ ಕಾರ್ಖಾನೆಗಳನ್ನು ತೆರೆಯುತ್ತಿದ್ದಾರೆ. ಕೇವಲ ಇನ್ನು ಒಂದೆರಡು ವರ್ಷಗಳಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಕೇಂದ್ರದ ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿರುವುದು ಸ್ಪಷ್ಟವಾಗಿದೆ. ಇದನ್ನು ಈಗಾಗಲೇ ಪೇಪರುಗಳಲ್ಲಿ ನೀವೂ ನೋಡಿರಬಹುದು.

ಶ್ರೀ ಡಿ. ಮೂಕಪ್ಪ.— ಗೊಬ್ಬರದ ಕಾರ್ಖಾನೆಯನ್ನು ತೆರೆಯುವ ಯೋಜನೆ ಸರ ಕಾರಕ್ಕಿದೆಯೇ?

ಶ್ರೀ ಎಸ್ ರಾಚಯ್ಯ.— ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹಣವನ್ನು ಒದಗಿಸಲಾಗಿದೆ. ಕೇಂದ್ರ ಸರಕಾರದ ಸಹಾಯದಿಂದ ರೈತರಿಗೆ ಅನುಕೂಲವಾಗುವಂತೆ ಒಂದು ಗೊಬ್ಬರದ ಕಾರ್ಖಾನೆಯನ್ನು ರಾಜ್ಯ ಸರಕಾರದವರು ತೆಗೆಯಬೇಕೆಂಬ ಯೋಜನೆ ಇದೆ. ಹೀಗೆ ನಮಗೆ ಮೂರನೆ ಪಂಚಾವಾರ್ಷಿಕ ಯೋಜನೆಯಲ್ಲಿ ಸುಮಾರು 250 ಕೋಟಿ ರೂಪಾಯಿ ಗಳು ಇರುವುದರಲ್ಲಿ ನಾವು 19.81 ಕೋಟಿಯಷ್ಟು ಹಣವನ್ನು ಆಹಾರದ ಉತ್ಪಾದನೆಗಾಗಿ ಎರಡನೇ ಪಂಚಾವರ್ಷಿಕ ಯೋಜನೆಯ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಒದಗಿ ಸಿದ್ದೇವೆ. ಅಗ್ರಿಕಲ್‌ಚರ್ ಪ್ರೊಡಕ್ಷನ್ನಿಗಾಗಿ ಮತ್ತು ಉತ್ಪತ್ತಿಗಾಗಿ 10.02 ಕೋಟಿ ಮೈನರು ಇರಿಗೇಷನ್ನಿಗಾಗಿ 7.5 ಕೋಟಿಗಳು, ಸಾಯಿಲ್ ಕನ್‌ಸರವೇಷನ್ನಿಗಾಗಿ 2.3 ಕೋಟಿ ಎಂದು ಇಷ್ಟೊಂದು ಹಣವನ್ನು ಹೆಚ್ಚು ಆಹಾರ ಉತ್ಪನ್ನ ಮಾಡುವುದಕ್ಕಾಗಿ ಒದಗಿಸಲಾಗಿದೆ. ಹಿಂದೆ ಇಷ್ಟು ಒದಗಿಸಿರಲಿಲ್ಲ. ಈಗಿರುವ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗೊಬ್ಬರದ ಕಾರ್ಖಾನೆಯಾಗುವ ನಂಬಿಕೆ ಇರುವ ಕಾರಣದಿಂದ ನಾನು ಮೊದಲು ಹೇಳಿದ ಕಾರಣಗಳಿಂದ ರಾಜ್ಯ ಮತ್ತು ಕೇಂದ್ರ ಸರಕಾರಗಳು ವ್ಯವಸಾಯದ ದೃಷ್ಟಿಯಿಂದ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕಾಗಿ ಹೆಚ್ಚು ಹೆಚ್ಚಾಗಿ ನೀರಾವರಿ ಕಾರ್ಯಕ್ರಮಗಳನ್ನು ಮೂರನೆ ಯೋಜನೆ ಯಲ್ಲಿ ಹೆಚ್ಚು ಮಾಡಿಕೊಂಡು ಈಗಿರುವ 10 ಲಕ್ಷದಷ್ಟು ಉತ್ಪಾದನೆಯ ಪ್ರಮಾಣದಲ್ಲಿರು ವುದನ್ನು ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವ ಭರವಸೆ ರಾಜ್ಯ ಸರಕಾರಕ್ಕೆ ಇದೆ ಎಂದು ಸಂತೋಷದಿಂದ ಇಲ್ಲಿ ತಮ್ಮ ಮುಂದೆ ಹೇಳುತ್ತೇನೆ.

ಮಾನ್ಯ ಸದಸ್ಯರು ರೀಸರ್ಚ್ ಸೈಡಿನಲ್ಲಿ ಏನೂ ಮಾಡಿಲ್ಲ ಎಂದು ಹೇಳಿದರು. ನಮ್ಮ ದೇಶದಲ್ಲಿ ತಮಗೇ ಗೊತ್ತಿರತಕ್ಕ ರೀತಿಯಲ್ಲಿ ವ್ಯವಸಾಯದ ಕ್ಷೇತ್ರದಲ್ಲಿ ಎಷ್ಟು ಗಮನವನ್ನು ಕೊಡುತ್ತಿದ್ದಾರೋ ಅಷ್ಟು ಗಮನವನ್ನು ಸ್ವರಾಜ್ಯ ಬರುವುದಕ್ಕೆ ಮುಂಚೆ ಆಗಿನ ಸರಕಾರ ಕೊಟ್ಟಿರಲಿಲ್ಲ. ಸ್ವರಾಜ್ಯ ಬಂದಮೇಲೆ ಈಗ ನಮ್ಮ ರಾಜ್ಯ ಸರಕಾರದವರು ಹೆಚ್ಚಿನ ಗಮನ ವನ್ನು ಕೊಟ್ಟು ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚು ಮಾಡಿ, ಪ್ರಾಣಿಗಳ ಸಂಪತ್ತನ್ನು ಮೀನು ಕೈಗಾರಿಕೆ ಅಭಿವೃದ್ಧಿ ಮುಂತಾದ ಇನ್ನೂ ಎಷ್ಟೋ ಅಭಿವೃದ್ಧಿ ಕಾರ್ಯಗಳನ್ನು,

ಕೈಗೊಂಡಿದ್ದಾರೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತಿದ್ದಾರೆ ಎನ್ನುವುದೂ ತಮಗೆ ತಿಳಿದೇ ಇದೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಹಾರದ ಉತ್ಪಾದನೆಯನ್ನು ಸಾಧಿಸಲು ಗೊಬ್ಬರದ ಮತ್ತು ಕಬ್ಬಿಣದ ಕಾರ್ಖಾನೆಗಳಿಂದ ಹೆಚ್ಚಿನ ಉತ್ಪನ್ನ ಬರದೆ ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಈಗ ಇನ್ನೂ ಹೆಚ್ಚು ಹೆಚ್ಚಾಗಿ ಟ್ರಾಕ್ಟರುಗಳು, ಬುಲ್ ಡೋಜರುಗಳು ವ್ಯವಸಾಯಕ್ಕೆ ಬೇಕಾಗಿವೆ. ಸುಮಾರು 600 ಕ್ಕೂ ಹೆಚ್ಚಿನ ಜನರು ಈಗ ಟ್ರಾಕ್ಟರುಗಳು ಬೇಕೆಂದು ಕೇಳುತ್ತಿದ್ದಾರೆ. ಆದರೆ ನಮಗೆ ಒದಗಿಸಲು ಶಕ್ತಿ ಇಲ್ಲ. ಈ ಯಂತ್ರಗಳನ್ನು ಪರದೇಶಗಳಿಂದ ತರಿಸಿಕೊಳ್ಳಬೇಕಾಗಿದೆ. ಇವುಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಕಾದಷ್ಟನು ಒದಗಿಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ ಈಗ ಇಂತಹ ಟ್ರಾಕ್ಟರುಗಳನ್ನು ಮತ್ತು ಬುಲ್ ಡೋಜರುಗಳನ್ನು ನಮ್ಮ ದೇಶದಲ್ಲಿಯೇ ತಯಾರು ಮಾಡಬೇಕೆಂದು ಕೇಂದ್ರ ಸರಕಾರದವರು ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಹಾಗೆ ಹಸರು ಗೊಬ್ಬರ, ಕಾಂಪೋಸ್ಟು ಇವುಗಳನ್ನು ಒದಗಿಸಲು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮೂಲಕ ಒದಗಿಸುತ್ತಿದ್ದರೂ ವ್ಯವಸಾಯಗಾರರಿಗೆ ಅನೇಕ ಕಡೆಗಳಲ್ಲಿ ಇದರಲ್ಲಿ ನಂಬಿಕೆ ಇರಲಿಲ್ಲ. ಇವೊತ್ತು ಯಾವ ಯಾವ ಕ್ಷೇತ್ರದಲ್ಲಿ ಯಾವ ರೀತಿಯ ಬೀಜಗಳನ್ನು ಹಾಕಬೇಕು, ಯಾವ ರೀತಿಯಾಗಿ ಗೊಬ್ಬರವನ್ನು ಮಾಡಿ ಹಾಕಬೇಕು, ಹೇಗೆ ಮಾಡಬೇಕನ್ನುವುದನ್ನು ರೈತರ ಮನಸ್ಸಿನಲ್ಲಿ ತಿಳುವಳಿಕೆ ಕೊಡತಕ್ಕಂತಹ ಭೂಮಿಯ ಮಾಲೀಕರಿಲ್ಲ. ರೈತರೇ ಆಹಾರ ಪದಾರ್ಥಗಳನ್ನು ಬೆಳೆಯತಕ್ಕದ್ದು, ಅವರಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು ಎನ್ನುವಂತೆ ಒದಗಿಸುತ್ತಿದ್ದೇವೆ ನೀರಾವರಿ ಸೌಕರ್ಯಗಳನ್ನು ಹೆಚ್ಚಾಗಿ ಒದಗಿಸುತ್ತಿದ್ದೇವೆ. ತಾವು ಹೇಳಿದಂತೆ ಕಷ್ಟಗಳು ಏನು ಆಗುತ್ತಿದೆ ಎನ್ನುವುದು ನಮಗೂ ಗೊತ್ತಾಗಿದೆ. ಈ ವಿಚಾರದಲ್ಲಿ ಕೇಂದ್ರ ಸರಕಾರದವರು ಮತ್ತು ನಮ್ಮ ರಾಜ್ಯ ಸರಕಾರದವರು ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಗ್ರಾಮಗಳಲ್ಲಿರುವ ರೈತರಿಗೆ ತಿಳುವಳಿಕೆ ಕೊಡಲು ವಿದ್ಯಾವಂಥರಾದವರು ಮತ್ತು ವ್ಯವಸಾಯ ಮಾಡುವವರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಬರಬೇಕು. ಈಗ ರೈತರಿಗೆ ಟ್ರಾಕ್ಟರುಗಳು, ಬುಲ್ ಡೋಜರುಗಳು ಇತ್ಯಾದಿಗಳನ್ನು ಉಪಯೋಗಿಸಿಕೊಳ್ಳಲು ಸರಿಯಾಗಿ ತಿಳಿಯುವುದಿಲ್ಲ. ಇದರ ಬಗೆಗೆ ತಿಳುವಳಿಕೆ ಕೊಡಲು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ವಿಧ್ಯಾವಂತರು ಅದರಲ್ಲಿಯೂ ಹೆಣ್ಣು ಮಕ್ಕಳು ಮತ್ತು ಗಂಡಸರು ಈ ಕ್ಷೇತ್ರದಲ್ಲಿ ವಿದ್ಯಾವಂತರಾಗಿ ಹೆಚ್ಚಾಗಿ ಬರಬೇಕು. ಜಪಾನು ದೇಶದ ವ್ಯವಸಾಯದ ಬಗ್ಗೆ ಈಚೆಗೆ ನಾನು ಒಂದು ಪುಸ್ತಕವನ್ನು ಓದುತ್ತಿದ್ದಾಗ ಅಲ್ಲಿನ ಜನ ವ್ಯವಸಾಯದ ಮೇಲೆ ಎಷ್ಟು ನಿಷ್ಟೆಯಿಂದ ಇದ್ದಾರೆ ಎಂದರೆ ಪ್ರತಿಯೊಂದು ಸಂಸಾರದಲ್ಲಿಯೂ Husbandry & Wifery ಯಂತೆ ಆಗಿದೆ ಎನ್ನುವುದು ತಿಳಿಯಿತು. ಅಲ್ಲಿ ಎಲ್ಲಾ ಹೆಣ್ಣು ಮಕ್ಕಳೂ ವ್ಯವಸಾಯದ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಟ್ರಾಕ್ಟರುಗಳನ್ನುಪಯೋಗಿಸುವುದರಲ್ಲಿ ಮತ್ತು ಇನ್ನಿತರ ಕೆಲಸಗಳನ್ನು ಮಾಡುವುದರಲ್ಲಿ ಗಂಡಸರೊಡನೆ ಮತ್ತು ವ್ಯವಸಾಯದಲ್ಲಿ ಪಂಡಿತರಾದವರೊಡನೆ ಹೆಚ್ಚು ಹೆಚ್ಚಾಗಿ ಕೆಲಸ ಮಾಡುತ್ತಿರವುದನ್ನು ನೋಡಬಹುದು. ನಾನು ರಷ್ಯಾ ದೇಶದಲ್ಲಿ ಹೋಗಿದ್ದಾಗಲೂ ಅಲ್ಲಿಯೂ ಈ ತರಹ ಇರುವುದನ್ನು ನೊಡಿದೆ. ಅಲ್ಲಿ ಹೆಣ್ಣು ಮಕ್ಕಳೇ ಎಷ್ಟೋ ಜನರು Horticultural Experts, Dairy Experts, Animal Husbandry Experts, ಇತ್ಯಾದಿ. ಹೀಗೆ ಹೆಚ್ಚು ಹೆಚ್ಚಾಗಿ ವಿದ್ಯಾವಂತರಾಗಿರುವವರು ಬಂದಿದ್ದರು. ನಮ್ಮ ದೇಶದಲ್ಲ ತಮಗೇ ಗೊತ್ತಿರುವಂತೆ ಮೂದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ಉಚಿತವಾಗಿ ಮಾಡುತ್ತಿರುವುದರಿಂದ, ಇನ್ನೂ ಕೇವಲ ಹತ್ತು ವರ್ಷಗಳೊಳಗೆ ನಮ್ಮ ಹೆಣ್ಣು ಮಕ್ಕಳು ಹೆಚ್ಚು ಹೆಚ್ಚಾಗಿ ವಿದ್ಯೆಯನ್ನು ಕಲಿಯಲು ಬರುತಾರೆನ್ನುವ ನಿರೀಕ್ಷೆ ಇದೆ. ಆಗ್ಗೆ ಇನ್ನೂ ಹೆಚ್ಚಿನ ಆಹಾರದ ಉತ್ಪತ್ತಿಯನ್ನು

(ಶ್ರೀ ಎಚ್. ರಾಚಯ್ಯ)

ಪಡೆಯಲು ತಾವು ಅಪೇಕ್ಷೆ ಪಟ್ಟಂತೆ, ಇನ್ನೂ ಹೆಚ್ಚಿನ ಆಸಕ್ತಿ ವಹಿಸಲು ಸಾಧ್ಯವಾಗಬಹುದು, ಮತ್ತು ಈಗಿರುವುದಿಕ್ಕಿಂತಲೂ ಹೆಚ್ಚಿನ ಆಹಾರ ಉತ್ಪನ್ನವನ್ನು ಮಾಡಲು ನಮ್ಮ ರಾಜ್ಯದ ಜನಗಳಿಗೆ ನೀರಿನ ಸಂಪತ್ತನ್ನು ಹೆಚ್ಚು ಮಾಡಿ ಅನುಕೂಲ ಮಾಡಿಕೊಡಲು ಏರ್ಪಾಡುಗಳಾಗುತ್ತಿವೆ. ಇವೆಲ್ಲವನ್ನೂ ನೋಡಿದರೆ, ಯಾವ ರಾಜ್ಯದಲ್ಲಿಯೂ ಉತ್ಪತ್ತಿಮಾಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಾವು ಆಹಾರಪದಾರ್ಥಗಳನ್ನು ಬೆಳೆಯಲು ತಕ್ಕ ಅವಕಾಶಗಳು ನಮ್ಮ ರಾಜ್ಯದಲ್ಲಿಯೇ ಇದೆ.

ಆದ್ದರಿಂದ ಈ ದಿವಸ ಈ ವಿಚಾರದಲ್ಲಿ ಯಾರೂ ಯಾವ ವಿಧವಾದಂಥ ಅನುಮಾನವನ್ನೂ ಸಹ ಪಡಬೇಕಾಗಿಲ್ಲ. ಬುಲ್‌ಡೋಜರ್‍ಸ್, ಕಬ್ಬಿಣ, ಗೊಬ್ಬರ ಟ್ರಾಕ್ಟರ್‍ಸ್, ನೀರಾವರಿ ಸೌಕರ್ಯ-ಇವೆಲ್ಲವೂ ರೈತರಿಗೆ ಸಾಕಷ್ಟು ದೊರೆಯುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಆದರೂ ರೈತರು ಇನ್ನೂ ಮುಂದೆ ಬಾರದೇ ಇರುವುದಕ್ಕೆ ಕಾರಣವೇನು ? ಬುಲ್‌ಡೋಜರ್‍ಸ್, ಟ್ರಾಕ್ಟರ್‍ಸ್ ಗೊಬ್ಬರ ಕಬ್ಬಿಣ—ಇವುಗಳನ್ನು ನಿಜವಾಗಿ ಸಾಕಷ್ಟು ರೈತರಿಗೆ ಒದಗಿಸುತ್ತಿದ್ದೀರೋ ?

ಶ್ರೀ ಎಚ್. ರಾಚಯ್ಯ.—ಈಗ ಸಾಕಷ್ಟು ಆ ಸಾಮಾನುಗಳು ಸಾಗಾಣಿಕೆಯಾಗಿ ಇಲ್ಲಿಗೆ ಬರುತ್ತಿಲ್ಲ. ಮಂತ್ರಿಯಾಗಿದ್ದರೂ ನನಗೂ ಜಮೀನು ಇದೆ. ಆದರೆ ಆ ಜಮೀನಿನಿಂದ ನನಗೆ ಬರಬೇಕಾದ ವ್ಯವಸಾಯ ಉತ್ಪತ್ತಿ ಆಗುತ್ತಾ ಇಲ್ಲ. ವ್ಯವಸಾಯದ ಕೂಲಿಗಾರರಿಗೇ ಸರಿಯಾದ ರಕ್ಷಣೆಯನ್ನು ಇನ್ನು ಕೊಟ್ಟಿಲ್ಲ. ಒಟ್ಟಿನಲ್ಲಿ ಏಕರೂಪವಾದ ಶಾಸನವನ್ನು ಜಾರಿಗೆ ತಂದು ವ್ಯವಸಾಯ ಕ್ಷೇತ್ರದಲ್ಲಿ ರೈತರಿಗೂ ಮತ್ತು ಕಾರ್ಮಿಕರಿಗೂ, ದನ, ಕುರಿ, ಕೋಳಿ, ಸಾಕುವ ಬಡ ರೈತರಿಗೂ equal wage for equal work ಎಂಬ ಪಾಲಿಸಿಯನ್ನು ಜಾರಿಗೆ ತರಬೇಕೆಂಬುದೇ ಸರ್ಕಾರದ ಮೂಲೋದ್ದೇಶ. ಆದರೆ ರಾಜ್ಯಾಂಗ ಬದ್ಧವಾಗಿ ಯಾವ ರೀತಿ ನ್ಯಾಯ ದೊರೆಯಬೇಕಾಗಿತ್ತೋ ಆ ರೀತಿಯಲ್ಲಿ ರೈತರಿಗೆ ಕೆಲವು ಫಾರಂಗಳಲ್ಲಿ ಕೊಟ್ಟಿಲ್ಲ. ಹೆಚ್ಚಿಗೆ ವಿಶ್ವಾಸವನ್ನೂ, ಬೆಂಬಲವನ್ನೂ, ಧೈರ್ಯವನ್ನೂ ರೈತರಿಗೆ ಉಂಟುಮಾಡಲು ನ್ಯಾಯವಾಗಿ ಅವರಿಗೆ ಎಲ್ಲ ಸೌಕರ್ಯಗಳನ್ನು, ಸಕಾಲಕ್ಕೆ ಒದಗಿಸಿದ್ದ ಪಕ್ಷದಲ್ಲಿ ಒಂದು ದಿವಸಕ್ಕೆ 8 ಘಂಟೆ ಬದಲಾಗಿ 10 ಘಂಟೆ ಕೆಲಸ ಮಾಡುತ್ತಾರೆಂಬ ನಂಬಿಕೆ ನನಗಿದೆ. ಇದರಿಂದ ಹೆಚ್ಚು ಉತ್ಪತ್ತಿ ಯಾಗುತ್ತದೆ. ರೈತರಲ್ಲಿ ಒಂದು ಸಂಘಟನೆಯಾಗಬೇಕು. ಫಾರ್ಮರ್‍ಸ್ ಫೋರಂನಲ್ಲಿ ಎಷ್ಟೇ ಪ್ರಮಾಣದಲ್ಲಾದರೂ ರೈತರಿಗೆ ಗೊಬ್ಬರ ಕೊಡಬೇಕು. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಈ ಫಾರ್ಮರ್‍ಸ್ ಫೋರಂನಲ್ಲಿ ರೈತರಿಗೆ ಬೇಕಾದಷ್ಟು ಸಾಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಮತ್ತು ರೈತರೆಲ್ಲರೂ ಸಂಘಟನೆಯಾಗಿ ಚೆನ್ನಾಗಿ ಕೆಲಸ ಮಾಡುವುದಕ್ಕಾಗಿ 50 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಗ್ರಾಂಟು ರೂಪವಾಗಿ ಕೊಟ್ಟಿದ್ದಾರೆ. ಈ ವರ್ಷವೂ ಅದೇ ರೀತಿಯಲ್ಲಿ ಕೊಡಬೇಕೆಂದಿದ್ದಾರೆ. ಮುಂದೆಯೂ ಕೊಡುವವರಾಗಿದ್ದಾರೆ. ಇದರಿಂದಾಗಿ ರೈತರು ಮುಂದೆ ಮುಂದೆ ಬಂದು ಕಬ್ಬಿಣ, ಟ್ರಾಕ್ಟರ್‍ಸ್, ಬುಲ್‌ಡೋಜರ್‍ಸ್‌ಗಳನ್ನು ಒದಗಿಸುವ ಹಾಗೆ ರೈತರೇ ಒಂದು ವರ್ಕ್‌ಷಾಪನ್ನು ಮೇಂಟೇನ್ ಮಾಡುವುದು, ಡೈರಿ ಫಾರಂಗಳನ್ನು ಮಾಡುವುದು ಎಂಗ್ ಫಾರ್ಮರ್‍ಸ್ ಅಸೋಸಿಯೇಷನ್ ಸ್ಥಾಪನೆ ಮಾಡುವುದು, ಅಲ್ಲದೆ ಡೆಮಾನ್‌ಸ್ಟ್ರೇಷನ್‍ಸ್ ಫಾರಮ್ ಎಂದು ಮಾಡುವುದು, ತೋಟಗಾರಿಕೆ ಮುಂತಾದ ಕೆಲಸಕಾರ್ಯಗಳಲ್ಲಿ ಪ್ರದರ್ಶನಗಳನ್ನು ಮಾಡುವುದು—ಈ ಕೆಲಸಗಳಿಗೆ ರೈತರೇ ಮುಂದೆ ಬಂದು ತಮ್ಮ ಈ ಕೆಲಸಕಾರ್ಯಗಳನ್ನು ವಿಚಕ್ಷಣೆಯಿಂದ ಶ್ರದ್ಧಾಸಕ್ತಿಗಳಿಂದ ಮಾಡುವುದಾದರೆ ದೇಶದಲ್ಲಿ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಬಹುದು. ಅಂತಹ ಒಂದು ಶಕ್ತಿ-ಸಾಮರ್ಥ್ಯ ಅವರಿಗೆ ಬರುತ್ತದೆ. ರೈತರೇ ತಾವೇ ಇವೆಲ್ಲವನ್ನೂ ಮಾಡೋಣವೆಂಬ ಧೈರ್ಯ, ಉತ್ಸಾಹ, ಅವರಿಗೆ ಬರಬೇಕು. ಇನ್ನು ಫಾರ್ಮರ್‍ಸ್ ಫೋರಂಗಳಲ್ಲಿ ಯಾವ ರೀತಿ ಬೇರೆ ದೇಶಗಳಲ್ಲಿ ಕೆಲಸ ನಡೆಯುತ್ತಿದೆ ಎಂಬುದನ್ನು

ನಮ್ಮ ದೇಶದ ರೈತರು ನೋಡಿಕೊಂಡು ಬರುತ್ತಿದ್ದಾರೆ. ಇನ್ನೂ ಹೆಚ್ಚು ಹೆಚ್ಚಾಗಿ ಅದೇ ರೀತಿ ನಮ್ಮ ದೇಶದ ರೈತ ಮುಖಂಡರನ್ನು ಜಪಾನ್ ಮತ್ತು ಅಮೇರಿಕಾ ದೇಶಗಳಗೆ ಕಳುಹಿಸಿ ಅಲ್ಲಿನ ವ್ಯವಸಾಯದ ರೀತಿ-ನೀತಿಗಳನ್ನು ಇಲ್ಲಿಯೂ ಅನುಸರಿಸುವಂತೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ. ಅದರಿಂದಾಗಿ ರೈತರ ಸಂಘಟನೆಯಾಗುತ್ತಿದೆ. ರೈತರಲ್ಲಿ ಹೆಚ್ಚಿನ ಆಸಕ್ತಿ, ಶ್ರದ್ಧೆ ಹೆಚ್ಚುತ್ತಿದೆ. ಸಾಕಾದಷ್ಟು ಈಚೀಚೆಗೆ ಕಬ್ಬಿಣ, ಗೊಬ್ಬರ ಮುಂತಾದ ವ್ಯವಸಾಯ ಉಪಕರಣಗಳನ್ನು ಕೊಡರಾಗುತ್ತಿದೆ. ಎಷ್ಟೆಷ್ಟು ಸಾಧ್ಯವೊ, ಅಷ್ಟನ್ನು ಹಂಚುತ್ತಿದ್ದೇವೆ. ಆದರೂ ಸರ್ಕಾರದ ಉದ್ದೇಶ ಸಾಧ್ಯವಾಗಲಿಲ್ಲ. ಇನ್ನೂ ಸ್ಟಾಕ್ ಬರುತ್ತಿದೆ. ಒಟ್ಟಿನಲ್ಲಿ ರೈತರಿಗೆ ಈಗ ಕೊಂಡತಕ್ಕ ಸೌಕರ್ಯಗಳನ್ನು ನೀವೆಲ್ಲರೂ ಒಪ್ಪಿಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡಿದೆ. ಇನ್ನು ರಿಸರ್ಚ್ ವಿಷಯದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 150 ಯೋಜನೆಗಳನ್ನು ಕಾರ್ಯಗತ ಮಾಡಲಾಗಿದೆ. ಸಂಬಂಧಪಟ್ಟ ಬೇಡಿಕೆಗಳು ಈ ಸಭೆಯಲ್ಲಿ ಚರ್ಚೆಗೆ ಬಂದಾಗ ಹೆಚ್ಚಿನ ವಿವರಗಳನ್ನು ಈ ಬಾಬಿನಲ್ಲಿ ಕೊಡುತ್ತೇನೆ. ಇನ್ನು ಪ್ಲಾಂಟ್ ಪ್ರೊಟೆಕ್ಷನ್, ಪೆಸ್ಟ್ಸ್ ಬಾರದೇ ಇರುವ ಹಾಗೆ, ಅವಕ್ಕೆ ಸರಿಯಾದ ಔಷಧಿಗಳನ್ನು ಹಂಚುವ ವಿಚಾರವನ್ನೂ ಸಹ ಮಾಡುತ್ತಿದ್ದೇವೆ. ಇದಕ್ಕಾಗಿ ಸಾಕಾದಷ್ಟು ಯೋಜನೆಗಳನ್ನು ಮಾಡಿದ್ದೇವೆ. ಈಗ ಆ ಯೋಜನೆಗಳ ಅಂತಸ್ತು ಮೀರಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇವೆ. ಆ ವಿವರಗಳನ್ನೆಲ್ಲಾ ಸಂಬಂಧಪಟ್ಟ ಬೇಡಿಕೆ ಬಂದಾಗ ಕೊಡುತ್ತೇನೆ.

ಇನ್ನು ಪ್ರಾಣಿಸಂಪತ್ತು ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾವು ಪ್ರಾಣಿಸಂಪತ್ತನ್ನು ಹೆಚ್ಚಿಸಿರುವ ಹಾಗೆ ಭಾರತ ದೇಶದಲ್ಲಿ ಯಾವ ರಾಜ್ಯದಲ್ಲೂ ಇಲ್ಲ. ಆ ರೀತಿ ಈ ಸಂಪತ್ತನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈಗ ನಮ್ಮ ರಾಜ್ಯದಲ್ಲಿ 527 ಪಶುವೈದ್ಯ ಶಾಲೆಗಳಿವೆ ಮತ್ತು 25 ಸಾವಿರ ಜಾನುವಾರುಗಳು ಇದ್ದ ಪಕ್ಷದಲ್ಲಿ ಒಂದೊಂದು ಪಶುವೈದ್ಯ ಶಾಲೆಯನ್ನು ತೆರೆದಿದ್ದೇವೆ. ಕಳೆದ ವರ್ಷ 40 ಪಶುವೈದ್ಯ ಶಾಲೆಗಳನ್ನು ತೆರೆದಿದ್ದೇವೆ. ಈ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 90 ಪಶುವೈದ್ಯ ಶಾಲೆಗಳನ್ನು ನಾವು ಮಂಜೂರು ಮಾಡಿ ಸಾಮಾನ್ಯವಾಗಿ ಅವನ್ನು ಎಲ್ಲ ಕಡೆಗಳಲ್ಲೂ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಈಗಿರತಕ್ಕ ಪಶುವೈದ್ಯ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವುದಲ್ಲದೆ ಅವನ್ನು ಆದಷ್ಟು ಜಾಗ್ರತೆ ಉತ್ತಮ ಗೊಳಸಬೇಕಾಗಿದೆ. ಏಕೆಂದರೆ ನಮ್ಮ ಸ್ಥಳಿಯ ಪ್ರಾದೇಶಿಕ ಕೆಲವು ಹಸುಗಳನ್ನು ನೋಡಿದರೆ ಸರಿಯಾಗಿ ಒಂದು ಪಾವು ಅಥವಾ $\frac{1}{4}$ ಪಾವು ಹಾಲನ್ನೂ ಸಹ ಕೊಡುವುದಿಲ್ಲ. ಕೇವಲ 50-60 ಹಸುಗಳೂ ಸಹ ತಮ್ಮ ಕರುಗಳು ಹಾಲನ್ನು ಪೂರ್ತಿಯಾಗಿ ಕುಡಿಯುವುದರಿಂದ ಹಾಲನ್ನೇ ಕೊಡುತ್ತಿಲ್ಲ. ಈಗ ಅದರ ಕೆಚ್ಚಲನಲ್ಲಿ ಹಾಲೇ ಇರುವುದಿಲ್ಲವೆಂದು ರೈತರು ಹೇಳುತ್ತಾರೆ. ಅಂದಮೇಲೆ ಅಲ್ಲಿ ಏನೋ ತಪ್ಪು ನಡೆವಳಿಕೆ ನಡೆಯುತ್ತಿದೆ ಎಂದು ಹೇಳಬಹುದು. ಆದಕ್ಕಾಗಿ ಹೊಸ ತಳಿಯನ್ನು ತುಂದು ಅದನ್ನು ಉತ್ತಮ ಪಡಿಸಬೇಕಾದರೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮಾಡುವ ಹಾಗೆ ಕೀ-ವಿಲೇಜ್ ಸ್ಕೀಮುಗಳನ್ನು ಮಾಡಬೇಕಾಗಿದೆ. ಎಲ್ಲೆಲ್ಲಿ ದನ ಸಂಪತ್ತು ಕಡಿಮೆ ಇದೆಯೋ, ಎಲ್ಲೆಲ್ಲ ತಳಿಯನ್ನು ಉತ್ತಮ ಪಡಿಸಲಿಕ್ಕ ಅವಕಾಶ ವಿದೆಯೋ ಅಂತಹ ಕಡೆಗಳಲ್ಲಿ ಆರ್ಟಿಫಿಷಿಯಲ್ ಸೆಂಟರುಗಳನ್ನು ತೆರೆಯಬೇಕಾಗಿದೆ. ಆಯಾ ಪ್ರದೇಶಗಳಲ್ಲಿಯೇ ಈ ವ್ಯವಸ್ಥೆಯನ್ನು ಏರ್ಪಾಡು ಮಾಡಿ ಒಳ್ಳೆಯ ತಳಿಯನ್ನು ಹೆಚ್ಚಿಸುವುದಕ್ಕೆ ಟಾಪ್ ಪ್ರೈಯಾರಿಟಿ ಕೊಡಬೇಕು. ಸಾಕಾದಷ್ಟು ಪ್ರಮಾಣದಲ್ಲಿ ಎಲ್ಲ ಕಡೆಗಳಲ್ಲೂ ಹಾಲನ್ನು ಸರಬರಾಯಿ ಮಾಡುವ ವಿಚಾರದಲ್ಲಿ ಪ್ಲಾನಿಂಗ್ ಕಮಿಷನ್ನಿನ ಶ್ರೀ ವರ್ಮ ನಾರಾಯಣಜೀಯವರು ಹೇಳಿರತಕ್ಕ ನೀತಿಯನ್ನು ರಾಜ್ಯ ಸರ್ಕಾರದವರು ಅನುಸರಿಸಿದ್ದಾರೆ. ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಹಾಲಿನ ಸರಬರಾಯಿ ಯೋಜನೆ ಬಹಳ ಯಶಸ್ವಿಯಾಗುತ್ತದೆ ಎಂಬುದಾಗಿ ನಾನು ತಮ್ಮ ಮುಂದೆ ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಈ ಪಶುವೈದ್ಯ

(ಶ್ರೀ ಎಚ್. ರಾಚಯ್ಯ)

ಶಾಲೆಗಳನ್ನು ತೆರೆಯುವುದರ ಜೊತೆಗೆ ಅನೇಕ ಕಡೆಗಳಲ್ಲಿ ಕೊಡಿಗೆ ಫಾರಂಗಳನ್ನು ತೆರೆಯ ಬೇಕೆಂದು ಸರ್ಕಾರ ಮನಸ್ಸು ಮಾಡಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯವಸಾಯದ ಒಂದು ಫಾರಂ ತೋಟಗಾರಿಕೆ ಹಣ್ಣು, ತರಕಾರಿ ಬೆಳೆಯುವ ಒಂದು ಫಾರಂ ಈ ರೀತಿ ಸೌಕರ್ಯಗಳನ್ನು ರೈತರಿಗೆ ಕೂಡಲಾಗುವುದು. ಇದರಿಂದ ಸಾಮಾನ್ಯ ಜನಗಳಿಗೆ ಹೆಚ್ಚಿಗೆ ಆಹಾರ ಪದಾರ್ಥಗಳು ಸುಲಭ ಬೆಲೆಗೆ ದೊರೆಯುತ್ತವೆ. 2 ಸಾವಿರ ಅಥವಾ 3 ಸಾವಿರ ಜನಸಂಖ್ಯೆ ಇರುವ ಕಡೆ ಒಂದೊಂದು ಕಂಬೈನ್ಡ್ ಅಗ್ರಿಕಲ್‌ಚರಲ್ ಫಾರಂಗಳನ್ನು ಮಾಡಿ ಅಲ್ಲಿ ಪೌಲ್‌ಟ್ರಿ, ಅನಿಮಲ್ ಹಸ್ಬೆಂಡ್ರಿ ಡೆವಲಪ್‌ಮೆಂಟ್, ಆಗ್ರಿಕಲ್‌ಚರ್, ಫಿಷರಿ,ಇತ್ಯಾದಿ ಸೌಕರ್ಯಗಳನ್ನು ಕೊಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ. ಇನ್ನು ಮಂಡ್ಯದಲ್ಲಿ ಈ ಯೋಜನೆಗಳ ಕೆಲವು ಪ್ರಯೋಗಗಳನ್ನು ಮಾಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ. ಕೇಂದ್ರ ಸರ್ಕಾರಕ್ಕೆ ಅವನ್ನೆಲ್ಲಾ ಕಳುಹಿಸಿದ್ದೇವೆ. ಅವರ ಅನುಮತಿ ಇನ್ನೂ ದೊರೆತಿಲ್ಲ. ಅದು ಆದಷ್ಟು ಜಾಗ್ರತೆ ಬರುತ್ತದೆಂಬ ಭರವಸೆಯೂ ಇದೆ. ಇನ್ನು ವ್ಯವಸಾಯೋತ್ಪಾದನೆ ಮಾಡುವಾಗ ವ್ಯವಸಾಯದ ಕೂಲಿಗಾರರಿಗೆ ಕೇವಲ ನಾಲ್ಕೈದು ಎಕರೆ ಜಮೀನು ಕೊಟ್ಟರೆ ಸಾಲದು. ಅವರಿಗೆ ವ್ಯವಸಾಯ ಮಾಡಲು ತಕ್ಕ ಸೌಕರ್ಯ ಗಳನ್ನು ಒದಗಿಸಿಕೊಡಬೇಕಾದುದು ಮುಖ್ಯವಾದುದು. ಈ ವಿಷಯದ ಬಗ್ಗೆ ನಾಲ್ಕೈದು ಸಲ ಮಂತ್ರಿ ಮಂಡಲದಲ್ಲಿ ಚರ್ಚೆಯಾಗಿದೆ. ಆದರೆ ಅದನ್ನು ಒಪ್ಪಿದ್ದರೂ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಎಲ್ಲಿ 4,5,10 ಎಕರೆ ಜಮೀನನ್ನು ಸರ್ಕಾರದವರು ಕೊಡತ್ತಾರೋ ಅಂತಹ ಕಡೆಗಳಲ್ಲಿ ರೈತರು ಕಾರ್ಮಿಕರು ಮುಂದೆ ಬಂದು ನಾವು ಒಂದು ಸಹಕಾರ ಸಂಘವನ್ನು ಮಾಡಿಕೊಳ್ಳುತ್ತೇವೆ ಎಂದು ಒಪ್ಪಿಕೊಂಡರೆ, ಅಂತಹ ಜನಗಳ ಒಪ್ಪಿಗೆ ತೆಗೆದುಕೊಂಡು ಅವರಿಗೆ ಆ 4-5-10 ಎಕರೆಜಮೀನನ್ನು ಸಹಕಾರ ಸಂಘದ ಕ್ಷೇತ್ರಕ್ಕೆ ಅನ್ವಯಿಸುವ ಕಾಯಿದೆಗಳ ಅನುಸಾರ ವಾಗಿ ಕೊಡಬೇಕೆಂದು ಸರ್ಕಾರದ ಆಶಯವಾಗಿದೆ. ಅಲ್ಲಿದೆ ಆ ರೀತಿ ಅವರು ವ್ಯವಸಾಯ ಮಾಡಲು ಅವರಿಗೆ ತಕ್ಕ ಸೌಕರ್ಯಗಳನ್ನೂ ಸಹ ಸರ್ಕಾರದವರು ಒದಗಿಸಿ ಕೊಡಬೇಕಾಗುತ್ತದೆ. ಈ ರೀತಿ ಯಾಗಿ ಆಹಾರ ಸಾಮಗ್ರಿಗಳನ್ನು ದೇಶದ ಜನತೆಗೆ ಸರ್ಕಾರ ಒದಗಿಸಬೇಕಾಗಿದೆ. ಇದರಿಂದ ವ್ಯವಸಾಯ ಕಾರ್ಮಿಕರಲ್ಲಿ ನಿರುದ್ಯೋಗ ಸಮಸ್ಯೆಯನ್ನೂ ಸಹ ಬಗೆಹರಿಸಬಹುದು.

ಮತ್ತು ಅವರ ಬಡತನ ಬಗೆಹರಿಯುವುದಕ್ಕೂ ಮತ್ತು ಅವರ ಸ್ಥಿತಿಗಳನ್ನೂ ಹೆಚ್ಚು ಉತ್ತಮ ಗೊಳ್ಳಲು ಸಾಧ್ಯವಾಗುತ್ತದೆ. ಇದನ್ನು ನಾವು ಈಗಾಗಲೇ ಮಾಡಿದ್ದೇವೆ. ಈ ವಿಚಾರ ಈಗ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ ಈ ವಿಚಾರ. ಈ ಬಗ್ಗೆ ಸರ್ಕಾರ ಇನ್ನು 1-2 ತಿಂಗಳಲ್ಲೇ ತೀರ್ಮಾನ ಕೈಗೊಳ್ಳುವ ನಿರೀಕ್ಷಣೆ ಇದೆ. ಇದರಿಂದ ವ್ಯವಸಾಯದ ಕಾರ್ಮಿಕರಿಗೆ ತುಂಬಾ ಅನುಕೂಲವಾಗುತ್ತದೆ, ಹಾಗೂ ಅವರ ಅಂತಸ್ತು ಸಹ ಇದರಿಂದ ಹೆಚ್ಚಾಗುತ್ತದೆ. ಇಷ್ಟೇ ಅಲ್ಲದೆ ಈ ಒಂದು ವ್ಯವಸ್ಥೆಯಿಂದ ಈ ಬಡವರಿಗೇನು ಜಮೀನನ್ನು ಕೊಡುವುದೋ ಅದನ್ನು ಅವರು ದುರ್ವಿನಿಯೋಗ ಮಾಡದಂತೆ ತಡೆಗಟ್ಟಿ ಪರಭಾರೆಗೆ ಅವಕಾಶವಿಲ್ಲದಂತೆ ಆಗು ವುದು. ಹೀಗೆ ಈ ವರ್ಗಕ್ಕೆ ಅತ್ಯಗತ್ಯವಾಗಿ ಬೇಕಾಗಿರತಕ್ಕ ಎಲ್ಲ ಸೌಕರ್ಯಗಳನ್ನೂ ಸರಬ ರಾಯಿ ಮಾಡತಕ್ಕ ವಿಚಾರದಲ್ಲಿ ಈಗ ಸರ್ಕಾರದವರು ತೀವ್ರ ಗಮನ ಕೊಡಲು ವ್ಯವಸ್ಥೆ ಮಾಡಲಿದ್ದೇವೆ. ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ವ್ಯವಸ್ಥೆಯು ಪ್ರತಿ ಯೊಂದು ತಾಲ್ಲೂಕಿನಲ್ಲೂ ಜಾರಿಗೆ ಬರುವಂತೆ ಮಾಡಲಾಗುತ್ತದೆ. ಈ ಬಾಬಿನಲ್ಲಿ ನಮಗೆ ಬೇಕಾಗತಕ್ಕ ಸಲಕರಣೆ ಮತ್ತು ತರಪೇತು ಪಡೆದ ಸಿಬ್ಬಂದಿಯೆಲ್ಲವನ್ನೂ ನಾವು ತಯಾರು ಮಾಡಿ ಕಳುಹಿಸಬೇಕಾಗಿದೆ. ನಮಗೆ ತರಪೇತು ಪಡೆದ ಸಿಬ್ಬಂದಿ ದೊರೆತರೆ ನಾವು ಪ್ರತಿ ಯೊಂದು ತಾಲ್ಲೂಕಿಗೂ ಈ ಯೋಜನೆಯನ್ನು ಹರಡಲು ಅನುಕೂಲವಾಗುತ್ತದೆ. ಆದರೆ ಈಗ ಕೆಲವು ತಾಲ್ಲೂಕುಗಳಲ್ಲಿ ಇದನ್ನು ಜಾರಿಗೆ ತರಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಈಗಾಗಲೇ 1958ರಲ್ಲಿ ಒಂದು ವೆಟರಿನೆರಿ ಕಾಲೇಜನ್ನು ನಾವಿಲ್ಲಿ ಸ್ಥಾಪನೆ ಮಾಡಿದ್ದೇವೆ. ಈ ಕಾಲೇಜಿನಲ್ಲಿ ಈಗಾಗಲೇ ವಿದ್ಯಾರ್ಥಿಗಳು ಮೂರನೇ ವರ್ಷದ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಇನ್ನು ಕೆಲವು ದಿವಸಗಳಲ್ಲೇ ಈ ಕಾಲೇಜಿನಿಂದ ಬಿ. ಎಸ್. ಸಿ. ಡಿಗ್ರಿಯನ್ನು ಪಡೆದು 40–50 ಜನರು ದೇಶಸೇವೆಗೆ ತಯಾರಾಗುವಂಥ ಅವಕಾಶವನ್ನು ನಾವೀಗಾಗಲೆ ಕಲ್ಪಸಿದ್ದೇವೆ. ನಾವು ಹೊರದೇಶಕ್ಕೂ ನಮ್ಮ ವಿದ್ಯಾರ್ಥಿಗಳನ್ನು ಕಳುಹಿಸಿ ತರಪೇತು ಪಡೆಯಲು ಅವಕಾಶವನ್ನೂ ಸಹ ಕಲ್ಪಿಸಿರುತ್ತೇವೆ. ನಾವು ಈಗ ಮತ್ತೊಂದು ಕಟ್ಟಡದ ಶಂಖುಸ್ಥಾಪನೆಯನ್ನು ಹೋದ ವರ್ಷ ಪ್ರಾರಂಭ ಮಾಡಿ ಈಗಾಗಲೇ ಆ ಕಟ್ಟಡ ಪೂರೈಸುತ್ತಾ ಬಂದಿದೆ. ಇದಕ್ಕೆ 26 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಾಗಿದೆ. ಮುಂದಿನ ತಿಂಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಎಸ್. ಕೆ. ಪಾಟೀಲರನ್ನು ಇದರ ಪ್ರಾರಂಭೋತ್ಸವಕ್ಕೆ ಕರೆನಬೇಕೆಂದಿದ್ದೇವೆ. ಈ ಅಧಿವೇಶನ ಮುಗಿಯುವುದಕ್ಕೆ ಮುಂಚೆಯೇ ಇದರ ಓಪನಿಂಗ್ ಸೆರ್ಮನಿಯನ್ನು ಮಾಡಬೇಕೆಂಬ ಆಸೆ ನಮಗಿದೆ. ಇಂಥ ಉತ್ತಮ ಕ್ಷೇತ್ರಗಳನ್ನು ತೆರೆಯತಕ್ಕ ವಿಚಾರದಲ್ಲಿ ಸರ್ಕಾರದವರು ತೀವ್ರ ಗಮನವನ್ನು ಕೊಟ್ಟು ಇವುಗಳನ್ನು ಕಾರ್ಯರೂಪಕ್ಕೆ ತರಲು ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 5 ಪಾಠಶಾಲೆಗಳನ್ನು ತೆರೆಯಲು ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದೀರಲ್ಲ...

ಶ್ರೀ ಎನ್. ರಾಚಯ್ಯ.—ಹಣವನ್ನೊದಗಿಸಿರುವುದು ನಿಜ. ಆದರೆ ನಾವು ಇಲ್ಲಿಯವರೆಗೂ ಈ ವಿದ್ಯಾಪೀಠ ಮತ್ತು ಈ ಎಕ್ಸ್‌ಟೆನ್ಸೀವ್ ಟ್ರೈನಿಂಗ್ ಸೆಂಟರುಗಳಿಂದ ತರಪೇತು ಹೊಂದಿದ ಜನರು ಸಿಗಬಹುದೆಂದು ಅಂದಾಜು ಮಾಡಿದ್ದೆವು. ಆದರೆ ಈಗ ಪ್ರತ್ಯೇಕವಾದ ಪಾಠಶಾಲೆಗಳನ್ನು ತೆರೆಯಲು ಮೂರನೇ ಪ್ಲಾನಿನಲ್ಲಿ 5 ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ. ಆದರೆ ಅಷ್ಟೇ ಏಕೆ ಈ ಶಾಲೆಗಳನ್ನು ನಾವು ಪ್ರತಿಯೊಂದು ಜಿಲ್ಲೆ ಹಾಗೂ ತಾಲ್ಲೂಕ್ ಕಸಬೆಗಳಲ್ಲಿ ಪ್ರಾರಂಭಿಸಬೇಕೆಂಬ ಆಸೆ ನಮಗಿದೆ. ಆದರೆ ನಾವು ಈಗ ಹೆಚ್ಚು ಜನರನ್ನು ಈ ಬಾಬಿನಲ್ಲಿ ತಯಾರು ಮಾಡಿದರೆ ಮುಂದೆ ಈ ಪೌಲ್‌ಟ್ರಿ ಫಾರಂ, ವ್ಯವಸಾಯ, ಗಾರ್ಡನಿಂಗ್, ತೋಟಗಾರಿಕೆ ಇತ್ಯಾದಿ ಯಾವುದೇ ಒಂದು ಬಾಬಿಗಾಗಲೀ ಈ ಜನರು ಅನುಕೂಲವಾಗುತ್ತಾರೆ. ಇಂಥ ಪದ್ಧತಿಯನ್ನು ಜಾರಿಗೆ ತರಲು ಈ ಸರ್ಕಾರ ಒಪ್ಪಿದೆ. ಈಗ ಬರಲಿರುವ ಮೂರನೇ ಯೋಜನೆಯಲ್ಲಿ ಇದನ್ನು ಖಂಡಿತವಾಗಿಯೂ ಜಾರಿಗೆ ತಂದೇ ತರುತ್ತೇವೆ. ಸರ್ಕಾರದವರು ಇಂಥ ಕಾರ್ಯಕ್ರಮಗಳನ್ನು ಬಹಳ ತೀವ್ರವಾಗಿ ಈಗ ಮುಂದುವರಿಸಿಕೊಂಡು ಬರುತ್ತಿದೆ. ಈಗಾಗಲೇ ಅಗ್ರಿಕಲ್‌ಚರಲ್ ಕಾಲೇಜಿನ ಕಟ್ಟಡ ಸಹ ಪೂರ್ಣವಾಗಿದೆ. ಅದನ್ನೂ ಕೂಡ ಆದಷ್ಟು ಜಾಗ್ರತೆ ಓಪನ್ ಮಾಡಬೇಕೆಂದಿರುತ್ತೇವೆ. ಇನ್ನು ಈ ಹಾಲಿನ ಸೆಂಟರುಗಳನ್ನು ತೆರೆಯತಕ್ಕ ವಿಚಾರದಲ್ಲಿ ಈಗಾಗಲೇ ಭದ್ರಾವತಿಯಲ್ಲಿ ಒಂದು ಸೆಂಟರನ್ನು ಪ್ರಾರಂಭಿಸಲಾಗಿದೆ. ಹಾಲಿನ ಕೊರತೆಯಿರತಕ್ಕ ಮೈಸೂರು, ಗುಲ್ಬರ್ಗ, ದಾವಣಗೆರೆ, ಕೊಡಿಗೆ, ಧಾರಾವ್ವಡ ಇಲ್ಲೆಲ್ಲ ಹಾಲಿನ ಕೇಂದ್ರಗಳನ್ನು ತೆರೆಯಲಾಗುವುದು. ಈ ಯೋಜನೆಯನ್ನೂ ಕೂಡ ಆದಷ್ಟು ಪ್ರದೇಶಗಳಿಗೆ ಮುಂದುವರಿಸಬೇಕೆಂಬ ಆಸೆ ಸರ್ಕಾರದವರಿಗಿದೆ.

ಇನ್ನು ಸ್ವಾಮಿ, ಈ ಮೀನುಗಾರಿಕೆ ವಿಚಾರದಲ್ಲಿ ಕೂಡ ನಾವು ಒಳ್ಳೆಯ ಪ್ರಯತ್ನಗಳನ್ನು ಕೈಗೊಂಡಿದ್ದೇವೆ. ನಮಗೆ ತಾ 1–11–56ರ ಮೇಲೆ ಹೊಸ ರಾಜ್ಯ ಜಾರಿಗೆ ಬಂದ ಮೇಲೆ ನಮಗೆ ಸುಮಾರು 200 ಮೈಲಿಗಳ ಸಮುದ್ರ ಕರಾವಳಿ ದೊರೆತಿರುತ್ತೆ. ಈ ಹಿಂದೆ ಈ ಬಾಬಿಗೆ ಒಂದು ಪ್ರತ್ಯೇಕ ಇಲಾಖೆ ಇರಲಿಲ್ಲ. ಈಗ ನಾವು ಇನ್‌ಫೆಂಟೈನ್ ಮತ್ತು ಮೆರೀನ್ ಎಂಬ ಎರಡು ಜಾತಿಯ ಮೀನುಗಳ ಅಭಿವೃದ್ಧಿಗೆ ಹೆಚ್ಚು ಗಮನ ಕೊಟ್ಟಿದ್ದೇವೆ. ಈ ಇಲಾಖೆಯ ವಿಚಾರದಲ್ಲಿ ಯಾರೂ ಅಷ್ಟು ಹೆಚ್ಚಿನ ಟೀಕೆಗಳನ್ನು ಮಾಡಿಲ್ಲ. ಆದಾಗ್ಯೂ ನಾವು ಈ ಬಾಬಿಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ. ಇನ್ನು ಇದರ ಸಲುವಾಗಿ 40–50 ಮೆಕನೈಸ್ಡ್

(ಶ್ರೀ ಎನ್. ರಾಚಯ್ಯ)

ಬೋಟುಗಳನ್ನಿಟ್ಟಿದ್ದೇವೆ. ಇದಕ್ಕಾಗಿ ಇನ್ನೂ 2-3 ಯಾರ್ಡುಗಳನ್ನು ಮಾಡಬೇಕೆಂದಿದ್ದೇವೆ. ಇದರ ಜೊತೆಗೆ ಸಬ್-ಸಿಡೈಜ್ಡ್ ರೂಪದಲ್ಲಿ ಉಪಕರಣಗಳನ್ನೂ ಮತ್ತು ಸಾಲವನ್ನೂ ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಈ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಮೂರನೇ ಪಂಚವಾರ್ಷಿಕ ಯೋಜನೆಯ ಪ್ರಗತಿಯನ್ನು ಸಾಧಿಸಬೇಕೆಂಬ ಆಸೆ ಸರ್ಕಾರದವರಿಗಿದೆ. ಇನ್ನು ಉಳಿದಿರತಕ್ಕ ಅಷ್ಟಿಷ್ಟು ವಿಚಾರಗಳನ್ನು ಮುಂದೆ ಖೋತಾ ಸೂಚನೆಗಳು ಚರ್ಚೆಗೆ ಬಂದಾಗ ಸಂಪೂರ್ಣವಿವರಗಳನ್ನು ಆಗ ಕೊಡಬಯಸುತ್ತೇನೆ. ನಾವು ಈ ಬಾಬುಗಳಲ್ಲೆಲ್ಲ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸಬೇಕಾಗಿರುತ್ತೆಂಬ ವಿಚಾರದಲ್ಲಿ ತಾವೆಲ್ಲರೂ ಒಳ್ಳೆಯ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದೀರಿ. ಆದರೆ ನಾವೂ ಸಹ ದೇಶದಲ್ಲಿ ಈ ವ್ಯವಸಾಯ ಹಾಗೂ ಆಹಾರೋತ್ಪಾದನೆ ವಿಚಾರದಲ್ಲಿ ಹೆಚ್ಚಿನ ಗಮನವನ್ನು ಕೊಟ್ಟು ಸಾಧ್ಯವಿರತಕ್ಕ ಪ್ರಯತ್ನಗಳನ್ನೆಲ್ಲ ಮಾಡುತ್ತಿದ್ದೇವೆ.

ಶ್ರೀ ಎ. ಎಂ. ಬಸವೇಗೌಡ.—ಭತ್ತದ ಬೆಳೆಗೆ ಮಲೆನಾಡಿನಲ್ಲಿ ಹುಳಗಳು ಬೀಳುತ್ತಿವೆ. ಅದಕ್ಕೇನು ಪರಿಹಾರ ಕಂಡುಹಿಡಿಯಲಾಗಿದೆ ?

ಶ್ರೀ ಎನ್. ರಾಚಯ್ಯ.—ಈಗ ಕೆಲವರು ಈ ವ್ಯವಸಾಯದ ಇಲಾಖೆಯಲ್ಲಿ ಶೇಕಡಾ 25 ಸಿಬ್ಬಂದಿ ಹೆಚ್ಚಾಗಿದೆ ಎಂತ ಹೇಳಿದ್ದಾರೆ, ನಾನು ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಬೇರೆ ರಾಜ್ಯಗಳಲ್ಲಿ ನಮ್ಮ ಇಲಾಖೆ ಸಿಬ್ಬಂದಿಯ 5ರಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ನಾವು ನಮ್ಮ ಹಣದ ಕೊರತೆಯಿಂದ ಆದಷ್ಟು ಕಡಮೆ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದೇವೆ. It is a developing Department. ಆದಾಗ್ಯೂ ಈ ದಿವಸ ಈ ಇಲಾಖೆಯಲ್ಲಿರತಕ್ಕ ಸಿಬ್ಬಂದಿ ಬಹಳ ಹೆಚ್ಚಾಗಿರುತ್ತೆಂದು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

4-30 P.M.

ಇನ್ನು ಬತ್ತಕ್ಕೆ ಹುಳ ಹತ್ತುವ ವಿಚಾರದಲ್ಲಿ ಅನೇಕರು ವಿನಾಕಾರಣವಾಗಿ ಗಾಬರಿಯಾಗಿದ್ದಾರೆ. ಎಲ್ಲೆಲ್ಲಿ ಭತ್ತಕ್ಕೆ ಹುಳ ಬಿದ್ದಿದೆ ಎಂದು ತಿಳಿದು ಬಂದಿದೆಯೋ ಅಲ್ಲಿಂದ ಬತ್ತ ತರಿಸಿ ತಜ್ಞರ ಪರಿಶೀಲನೆಗೆ ಕಳಿಸಿಕೊಡಲಾಗಿದೆ, ತಜ್ಞರ ವರದಿಯ ಪ್ರಕಾರ ಈ ವಿಷಯದಲ್ಲಿ ಹೆದರಿಕೆಗೆ ಏನೂ ಆಸ್ಪದವಿಲ್ಲ. ಬತ್ತವನ್ನು ಯಾವ ರೀತಿಯಾಗಿ ಸಂರಕ್ಷಣೆ ಮಾಡಬೇಕು ಎಂಬುದಕ್ಕೆ ವಿಧವಿಧವಾದ ರೀತಿಯಲ್ಲಿ ಪ್ರಚಾರಕಾರ್ಯ ಮಾಡಲ್ಪಟ್ಟಿದೆ. ಪತ್ರಿಕೆಗಳಲ್ಲಿ ತಿಳಿಸಲಾಗಿದೆ, ಕೆಲವೊಂದು ಜನರು ತಮ್ಮ ಸ್ವಾರ್ಥ ಸಾಧನೆಗಾಗಿ ಬತ್ತಕ್ಕೆ ಹುಳ ಹತ್ತಿದೆ ಎಂದು ಅಪಪ್ರಚಾರ ಮಾಡಿ ರೈತರನ್ನು ಹೆದರಿಸಿ ಕಡಿಮೆ ಬೆಲೆಗೆ ರೈತರಿಂದ ಬತ್ತಕೊಂಡು ಸಂಗ್ರಹ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. It is a psychological panic. ಇಂಥ ಅಪಪ್ರಚಾರಕ್ಕೆ ಯಾರೂ ಮೋಸಹೋಗಬಾರದು. ಅದಕ್ಕಾಗಿ ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಕೊಟ್ಟಿದ್ದೇವೆ. ಬತ್ತದ ಬೆಳೆಗೆ ಸ್ಪ್ರೇ ಮಾಡುವ ವಿಚಾರದಲ್ಲಿ ವಿವರಣೆ ಕೊಟ್ಟು ತಿಳಿಸಿದೆ. ಈ ರೋಗ ತಡೆಗಟ್ಟುವುದಕ್ಕೆ ಎಲ್ಲ ರೀತಿಯಿಂದ ಕ್ರಮ ತೆಗೆದುಕೊಂಡಿದ್ದೇವೆ. ಏನಾದರೂ ಪರಿಹಾರ ಬೇಕಾದರೆ ಕೊಡುತ್ತೇವೆ. ಆದುದರಿಂದ ಈ ಬತ್ತದ ರೋಗದ ಬಗ್ಗೆ ಹೆದರುವ ಕಾರಣವಿಲ್ಲ.

ಇನ್ನು ಸಮಾಜ ಕಲ್ಯಾಣ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಆದರೆ ಸಮಾಜ ಕಲ್ಯಾಣ ವಿಚಾರದಲ್ಲಿ ಮಾನ್ಯ ಸದಸ್ಯರು ಹೆಚ್ಚಾಗಿ ಪ್ರಸ್ತಾಪ ಯಾರೂ ಮಾಡಿಲ್ಲ. ಶ್ರೀ ಶ್ಯಾಮಸುಂದರ್ ಅವರೂ ಶ್ರೀ ರಾಚಯ್ಯನವರೂ ಈ ವಿಷಯ ಪ್ರಸ್ತಾಪ ಮಾಡಿ ಒಳ್ಳೇ ಸಲಹೆಗಳನ್ನು ಮಾಡಿದ್ದಾರೆ. ಹರಿಜನರ ಪ್ರಗತಿಗಾಗಿ ರಾಜ್ಯಾಂಗಕ್ಕೆ ಅನುಗುಣವಾಗಿ ಏನೂ

ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಂದು ಮುಂತಾಗಿ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಅವರು ಹೇಳುವಾಗ ಅತಿಯಾಗಿ ಉತ್ಪ್ರೇಕ್ಷೆ ಮಾಡಿ ಹೇಳಿದ್ದಾರೆ. ಇಲ್ಲಿಯವರೆಗೆ ನಾವು ಏನೇನು ಮಾಡುತ್ತಾ ಬಂದಿದ್ದೇವೆಯೋ ಅದನ್ನು ಎಲ್ಲರಿಗೂ ತಿಳಿಸುತ್ತಲೇ ಬಂದಿದ್ದೇವೆ. ಇನ್ನೊಂದು ವಿಚಾರ. ಅವರು ಹೇಳುತ್ತಾ ಹರಿಜನರಿಗೆ ಪ್ರಾತಿನಿಧ್ಯ ಕೊಡುವ ಕಾಲದಲ್ಲಿ ವಯಸ್ಸಿನ ಪರಿಮಿತಿಯನ್ನು ತೆಗೆದುಹಾಕಬೇಕೆಂದು ಅವರು ಹೇಳಿದ್ದಾರೆ. ನಾವು ಯಾವ ಬಗ್ಗೆಯೂ ತೀರ್ಮಾನ ತೆಗೆದುಕೊಂಡಿಲ್ಲ. ಈ ಎಲ್ಲ ಅಂಶಗಳನ್ನೂ ಈ ಸಭೆಯಲ್ಲಿ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಒಂದು ಮಾತನ್ನು ಮಾತ್ರ ನಾನು ಹೇಳಲು ಇಷ್ಟಪಡುತ್ತೇನೆ. ಹರಿಜನ ಉಮೇದುವಾರರಿಗೆ, ಹಿಂದುಳಿದ ವರ್ಗದ ಉಮೇದುವಾರರಿಗೆ ಪ್ರಾತಿನಿಧ್ಯ ಕೊಡುವಾಗ್ಗೆ ಯಾವ ವಿಧವಾಗಿಯೂ ಅಡ್ಡಿ ಆತಂಕಗಳು ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಮಾತ್ರ ಭರವಸೆ ಕೊಡುತ್ತೇನೆ. Competitive examination ಪ್ರತ್ಯೇಕವಾಗಿ ಇಡಬೇಕು ಎಂದು ಒಂದು ಸೂಚನೆ ಬಂದಿದೆ. ಈ ಬಗ್ಗೆ ಪರಿಶೀಲನೆಮಾಡುತ್ತೇವೆ. ಎಲ್ಲ ಉಮ್ಮೇದುವಾರರ ಬಗ್ಗೆ ಒಂದೇ ರೀತಿಯಾಗಿ Competitive examination ಇಡುವುದು ಅಷ್ಟು ಒಳ್ಳೆಯದಲ್ಲ ಎಂದು ಅನಿಸುತ್ತದೆ. ರಾಜ್ಯಾಂಗದಲ್ಲಿ ಹರಿಜನರಿಗೆ, ಪರಿಶಿಷ್ಟ ವರ್ಗದವರಿಗೆ, ಗಿರಿಜನರಿಗೆ ಶೇಕಡ 18 ರಷ್ಟು ಸ್ಥಳಗಳನ್ನು ಮೀಸಲಾಗಿ ಇಡಬೇಕೆಂದು ಹೇಳಿದೆ. ಪ್ರತಿಯೊಂದು ಇಲಾಖೆಗಳಲ್ಲಿ ಪ್ರಾತಿನಿಧ್ಯ ಕೊಡಬೇಕಾಗಿದೆ. ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ಹಿಂದುಳಿದ ವರ್ಗದಿಂದ ವಿದ್ಯಾ ಅರ್ಹತೆಯುಳ್ಳ ಉಮೇದುವಾರರು ಸಿಕ್ಕದೇ ಹೋದ ಪಕ್ಷದಲ್ಲಿ ನೇರವಾಗಿ ನೇಮಕ ಮಾಡಬೇಕಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ರಿಜರ್ವೇಷನ್ ಮಾಡಬೇಕಾಗುತ್ತದೆ. ಹಿಂದುಳಿದವರಿಗೆ ವಿದ್ಯಾಭ್ಯಾಸ ಸಾಕರ್ಯ ಒದಗಿಸುವುದು ಆರ್ಥಿಕ ಅಭಿವೃದ್ಧಿ ಮಾಡುವ ವಿಚಾರದಲ್ಲಿ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವಿಚಾರದಲ್ಲಿ ಇನ್ನೂ ಹೆಚ್ಚಿಗೆ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾ ಇದ್ದೇವೆ. ಆಂಧ್ರ ಪ್ರದೇಶದಲ್ಲಿ ಈ ಬಗ್ಗೆ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಿ ಕೆಲವು ಕ್ರಮ ತೆಗೆದುಕೊಂಡಿರತಕ್ಕಂಥಾದ್ದನ್ನು ನಾವೂ ಸಹ ಯೋಚನೆ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ವಿಶೇಷವಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಉಳಿದ ಎಲ್ಲಾ ಕ್ಷೇತ್ರಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಮಾಡಿ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ.

Sri B. SHAMSUNDAR.—About two years ago, there was an order issued that unless the quota of reservation is fulfilled, no other candidates should be entertained against those posts. Has that been fulfilled ?

ಶ್ರೀ ಎನ್. ರಾಚಯ್ಯ.—Yes. ನಮ್ಮ ಸರಕಾರ ಬಂದಮೇಲೆ ಏನೇನು ಮಾಡಲಾಗಿದೆ ಎಂಬುದನ್ನು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ವೇಳೆ ಯಾವುದಾದರೂ ಒಂದು ಇನ್ನೂ ಕಾರ್ಯಗತವಾಗದೇ ಇದ್ದ ಪಕ್ಷದಲ್ಲಿ. ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಇನ್ನು ಹರಿಜನರ ಪ್ರಗತಿ ವಿಚಾರದಲ್ಲಿ ಕೆಲವು ವಿಚಾರ ಹೇಳುವಾಗ ಕೆಲವು ಸದಸ್ಯರು ಟೀಕೆ ಮಾಡಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಬಹಳ ಅನಾಹುತವಾಗಿದೆ ಎಂದು ಹೇಳಿದರು. ಅವರೇನೋ ಚೆನ್ನಾಗಿ ಭಾಷಣ ಮಾಡಿದರು. ಯಾರು ಶ್ರೀ ಶಾಮಸುಂದರ್ ಅವರಿಗೆ ಚೆನ್ನಾಗಿ ಅನುಭವವಿದೆ, ಆದರೆ ಅದನ್ನು ಹೇಳುವಾಗ್ಗೆ ಈ ರೀತಿ ಅವರು ದುಡುಕಬಾರದಾಗಿತ್ತು. ಯಾಕೆಂದರೆ ಸತ್ಯವಾಗಿರುವ ಅಂಕಿ-ಅಂಶಗಳನ್ನು ಅವರು ಕೊಡುವುದಿಲ್ಲ. ಸತ್ಯವಾದ ಅಂಕಿಅಂಶಗಳನ್ನು ಕೊಡಬೇಕಾಗಿತ್ತು. ಇಂಥ ನೀತಿಯನ್ನು ಅನುಸರಿಸದೆ ಇದ್ದರೆ ಚೆನ್ನಾಗಿತ್ತು.

(Sri N. RACHAIAH)

You are a very efficient, elderly, experienced member of the Harijan community and also an Hon'ble Member of this House. You make very good speeches and very spirited speeches, sometimes not on facts.

Sri B. SHAMSUNDAR.—Even 'sometimes' I do not want to accept. The fact which I wanted to bring to your notice as for as the Hyderabad-Karnatak area is concerned is, I have been asking you for the last three years to give some funds and to buy that hostel at Gulbarga and to build a building at Bidar and at Raichur. There are 230 students in Gulbarga and 150 in Bidar. For those hostels, you have not given anything. These are the things which are brought to my notice by your friends, by those who are in your own camp.

Sri N. RACHAIAH.—Some of my friends gave you wrong information.

Sri B. SHAMSUNDAR.—For that, you are to blame and your party are to blame.

Sri N. RACHAIAH.—The integration of the State took place only on 1st November 1956. You were there as a very great champion, moving from Hyderabad to Delhi and now from Bangalore to Delhi and Hyderabad. Have you written to me so far that some hostel must be started in Gulbarga or somewhere? As a member belonging to the Scheduled Castes, it is not only your duty to attack the Government but it is also your duty to work for the amelioration of the backward classes and also the Scheduled Castes. He has not written even one letter for starting a child welfare centre, a community centre or even a hostel. He has not even written a letter that so much amount is required for the construction of a hostel or building in Gulbarga or in any other Karnataka area. For information, I may say that we have already notified to acquire the building where the said number of students are actually living. We have also given Rs. 61,000. Some of my friends to whom he referred are quite ignorant about this. I am not responsible for this. We have issued a Gazette notification for the acquisition of the building. I have placed Rs. 61,000 out of Rs. 80, 00, for acquiring the building and I am going to see that that building is acquired and all the students to whom he is referring are accommodated. Government has not failed to take action even in that place. With regard to Raichur, recently I went there twice. During my second tour, I laid the foundation in Raichur. We have already given Rs. 60,000 and I am going to give another Rs. 60,000. I am giving a minimnm of Rs. one lakh for each district headquarters. So long as the number of students of the scheduled castes increase, we are going to increase the building grant also, that is the policy of the Government. We have not made any discrimination whatsoever. Even in Bidar......

Sri C. J. MUCKANNAPPA.—I am on a point of order.

Mr. CHAIRMAN.—If it is not a point of order, the next time he raises a point of order, I will not allow that.

Sri C. J. MUCKANNAPPA.—Please hear what is my point of order.

Mr. CHAIRMAN.—Where is the point of order, when the Minister is replying ?

Sri C. J. MUCKANNAPPA.—You cannot turn a deaf ear to what I intend to say.

Sri J. B. MALLARADHYA.—I do not think the Chair can take up this position. Here is an Hon'ble Member of this House from the Opposition who rises to a point of order.

Sri C. J. MUCKANNAPPA.—You are simply treating us like school children. You please address the members in a dignified way.

Sri J. B. MALLARADHYA.—I am rising a point of order on the position taken here. An Hon'ble Member of this House is rising to a point of order and the Speaker cannot pre-judge the issue and say 'That is not a proper point of order. I won't allow you to speak''. I am raising this point on the statement made by the Speaker that if there is no point of order, he will not allow him to speak next time.

Mr. CHAIRMAN.–If any Hon'ble Member wants to speak, he must stand up and take the permission of the Chair and their raise a point of order.

Sri C. J. MUCKANNAPPA.—Sir, nowhere it is mentioned so. My point of order was, the Minister for Social Welfare was replying in Kannada and suddenly he changed over to English. You did not observe whether he had broken the convention established in this House that a Member should conclude in the language in which he commenced his speech. How can you say that you cannot allow me to raise a point of order ? I want to know whether a member can shift from Kannada to English and to Tamil and to Malayalee.

ಶ್ರೀ. ಜೆ. ಬಿ. ಮಲ್ಲಾರಾಧ್ಯ.—ಯಾರಾದರೂ ಒಬ್ಬರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದರೆ ಅವರು ಮೊದಲು ಮಾತನಾಡಿದ ಮೇಲೆ ಸ್ಪೀಕರ್‌ರವರು ರೂಲಿಂಗು ಕೊಡುವುದು ಒಂದು Convention ಇದೆ ಎಂದು ನನ್ನ ಅಭಿಪ್ರಾಯ.

ಸಭಾಪತಿಯವರು.—ಒಂದು ವಿಧಿ ಲೋಪದ ಮೇಲೆ ಎಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಸಾಧ್ಯ?

ಶ್ರೀ. ಜೆ. ಬಿ. ಮಲ್ಲಾರಾಧ್ಯ.—ಒಂದು ಪಾಯಿಂಟು ಆಫ್ ಆರ್ಡರು ಮೇಲೆಯೇ ರೂಲಿಂಗು ಕೊಡುವುದಕ್ಕೆ ಆಗವುದಿಲ್ಲ. ಸಾಧ್ಯವಿದ್ದರೆ ಅದರ ಮೇಲೆ ಒಬ್ಬೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವ ಪದ್ಧತಿ ಇದೆ.

This is not the convention of the House. When some Member is on his legs, the Speaker should not interfere. Sir, this is not the convention of the House. When some member is on his legs, the Speaker should not interfere.

The point of order I wanted to bring to your notice is this. It was rather unusual that the Speaker should treat a Member in the manner you did. Mr. Muckannappa raised a point of order and as soon as he got up you were pleased to observe, 'if it is not really a point of order, next time when you rise to a point of order, I will not allow'. My point is, the Hon'ble Speaker cannot take up that position. It is the

(Sri J. B. MALLARADHYA)

inherant right of a Member of this House to raise a point of order. It is for the Chair to say whether there is a point of order in it or not. Beyond that Scope, the Speaker cannot pre-suppose that there is no point of order and prevent the member from doing so.

Mr. CHAIRMAN.—Not that I want to curb the right of any Hon'ble Member here; not at all.

ಶ್ರೀ. ಜೆ. ಬಿ. ಮಲ್ಲಾರಾಧ್ಯ.—ನಾನು ಇನ್ನೂ ಮಾತನ್ನೇ ಮುಗಿಸಿಲ್ಲ. ಮಧ್ಯೇ ಮಧ್ಯೇ ನೀವು ಮಾತನಾಡಿದ್ದರೆ ಹೇಗೆ? ಇದು ನನಗೆ ಹೊಸ ಅನುಭವ. ಸೇವಾ ಸಹಾನುಭೂತಿಯಿಂದ ನಡೆಯಬೇಕು ಎಂದು ಹೇಳತಕ್ಕ ಜನರಲ್ಲಿ ನಾನೂ ಒಬ್ಬನಾಗಿದ್ದೇನೆ. ತಾವು ಈ ಸಂಧರ್ಭದಲ್ಲಿ ತಾಳಿದಂಥ ನೀತಿಯ ವಿಷಯದಲ್ಲಿ ನನಗೆ ಬಹಳ ವಿಷಾದವುಂಟಾಗಿದೆ. ನನ್ನ ಸೂಚನೆಗಳೇನು ಎನ್ನುವುದನ್ನು ತಮ್ಮ ಮುಂದೆ ಹೇಳುತ್ತೇನೆ. ಪಕ್ಷದ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುವ ಅಧಿಕಾರ ನಿಮಗಿಲ್ಲ. ಈ ವಿಧವಾದ ಅಧಿಕಾರವನ್ನು ತಾವು ತಾಳುವುದಕ್ಕಾಗಲೀ, ಈ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲ ಎನ್ನುವ ವಿಚಾರವನ್ನು ವಿನಯದಿಂದ ತಮ್ಮ ಅವಗಾಹನೆಗೆ ತರಬೇಕು. ತಾವು ಈಗ ಹಾಗೆ ಹೋಗುತ್ತಿದ್ದೀರಿ.

ಶ್ರೀ ಎನ್. ರಾಚಯ್ಯ.—ನಾನು ಇಂಗ್ಲೀಷಿನಲ್ಲಿ ಮಾತನಾಡಬೇಕೆನ್ನುವ ಇಚ್ಛೆ ಇರಲಿಲ್ಲ. ಶ್ರೀ ಮಾರ್ಗ. ಶಾಮಸುಂದರ್‌ರವರಿಗೆ Convenience ಮಾಡುವ ಉದ್ದೇಶದಿಂದ ಹೇಳೋಣವೆಂದು ಹೇಳಿದೆನೇ ಹೊರತು ಇದರಲ್ಲಿ ಮತ್ತೇನಿಲ್ಲ.

Sri C. J. MUCKANNAPPA.—I have not crossed against the Agriculture Minister. Because there was a ruling in this House in this regard, I brought it to the notice of the Chair.

Sri B. K. PUTTARAMAIYA —Sir, you have not given a ruling regarding the point of order raised by Sri Mallaradhya. The point of order is, whether the Speaker has got power to say that a member will not be given a chance to raise a point of order again unless he proved that his present point of order was really a point of order.

Sri M. RAMAPPA (Harihar).—He does not understand the point of order.

Sri B. K. PUTTARAMAIYA.—That is the difficulty.

ಸ್ವಾಮಿ, ತಾವು ಅಧ್ಯಕ್ಷರು ಹೌದೋ ಅಲ್ಲವೋ ಎನ್ನುವ ಪ್ರಶ್ನೆಗೆ ಈಗ ಹೋಗುವುದಿಲ್ಲ. ಈಗ ಬಂದಿರುವ ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗು ಕೊಡುತ್ತೀರಾ ಇಲ್ಲವೇ ? ತಮಗೆ ಕನ್ನಡದಲ್ಲಿ ಹೇಳುವಾಗ, ನಾನು ನಿಮಗಿಂತ ಕನ್ನಡ ಗೊತ್ತಿರುವುದರಿಂದ ಕನ್ನಡದಲ್ಲಿಯೇ ವಿವರಿಸುತ್ತೇನೆ. ಶ್ರೀ ಮುಕ್ಕಣ್ಣಪ್ಪನವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದರು. ನೀವು ಪಾಯಿಂಟ್ ಆಫ್ ಆರ್ಡರ್ ಬರುತ್ತದೆ ಅಥವಾ ಇಲ್ಲ ಎಂದರೆ ಅವರು ಮಾತನಾಡಬಹುದು. ತಾವು ಅಧ್ಯಕ್ಷರಾಗಿರುವಾಗ ಪಕ್ಷಾತೀತರು. ನೀವು ನಮ್ಮ ಪರವಾದವರಲ್ಲ, ಅವರ ಪರವಾದವರಲ್ಲ ಅವರೂ ನಾವೂ ಎಲ್ಲರೂ. ಒಂದೇ ತಮಗೆ. ಶ್ರೀ ಮುಕ್ಕಣ್ಣಪ್ಪನವರು ಪಾಯಿಂಟ್ ಆಫ್ ಆರ್ಡರು ಎತ್ತುವುದಕ್ಕೆ ಏನು ಹೇಳಿದ್ದಾರೆ ಎಂದರೆ.

(*Interruption*)

ಈ ರೀತಿ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಡದೆ ಹೋದರೆ, ಹೇಗೆ ? ಈ ಸಭೆಯಲ್ಲಿ ಸದಸ್ಯರಾಗಿ ನಾವೇಕೆ ಇರಬೇಕು ? ಈ ಸಭೆಯಲ್ಲಿ ಏನಾದರೂ ಅವ್ಯವಸ್ಥೆ ನಡೆದಾಗ ಅದನ್ನು ತಿಳಿಸಲು ಪ್ರತಿಯೊಬ್ಬ ಸದಸ್ಯರಿಗೂ ಅವಕಾಶವಿದೆ.....

ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳುವುದಿಲ್ಲವಲ್ಲ! ನಿಮಗೆ ಆಗಿರುವುದಾದರೂ ಏನು? ನಿಮಗೆ ಪಾಯಿಂಟ್ ಆಫ್ ಆರ್ಡರು ಏನು ಎನುವುದನ್ನು ಅರ್ಥಮಾಡಿ ಕೊಳ್ಳುವುದಕ್ಕೆ ಆಗುತ್ತಿಲ್ಲ. ಈಗ ಶ್ರೀ ಮಲ್ಲಾರಾಧ್ಯರವರು ಎತ್ತಿದ ಪಾಯಿಂಟ್ ಆಫ್ ಆರ್ಡರು ಏನಾಯಿತು?

ತಾವೇಕೆ ಹೀಗೆ ಮಧ್ಯೆ ಮಾತನಾಡುತ್ತೀರಿ?

ಶ್ರೀ ಮುಕ್ಕಣ್ಣಪ್ಪನವರು ಎತ್ತಿದ ಪಾಯಿಂಟ್ ಆಫ್ ಆರ್ಡರನ್ನು ಎತ್ತಿದಾಗ ಅದು ಆಗದೇ ಹೋದರೆ, ನಾವೇನೂ ಮಾಡುತ್ತಿರಲಿಲ್ಲ. ಆದರೆ ಅದರ ಬಗ್ಗೆ ಏನೂ ಹೇಳದೆ ಇರುವಾಗ ಶ್ರೀ ಮಲ್ಲಾರಾಧ್ಯರವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಲು ಅವಕಾಶ ಕೊಡುವುದಿಲ್ಲ ಎಂದು ಹೇಳಲು ಹಕ್ಕಿದೆಯೇ ಇಲ್ಲವೇ ಎಂದು ಹೇಳಿದರು. ಇದರ ಬಗ್ಗೆ ತಾವು ರೂಲಿಂಗು ಕೊಡಿ, ಅಧ್ಯಕ್ಷರು. ಈ ಸಭೆಯ ಸದಸ್ಯರು ಪಾಯಿಂಟ್ ಆಫ್ ಆರ್ಡರನ್ನು ಎತ್ತುವುದು ಸರಿಯಲ್ಲವೆಂದು ಮತ್ತು ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುವ ಅಧಿಕಾರ ಅಧ್ಯಕ್ಷರಿಗಿದೆಯೇ ಇಲ್ಲವೇ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಿ.

5-00 P.M.

Mr. CHAIRMAN.— Wheu the Hon'ble Minister was replying, Sri Arumugham wanted to interrupt. The Minister was not yielding. At that time, Sri Muckannappa wanted to say something, whether it be in the nature of a point of order or not. In the first instance, he wanted to interrupt the Minister and say something. He stood up....

Sri V. P. DEENADAYALU NAIDU.— Sir, I submit we cannot go on wasting the time of the House in this manner. I would like the Leader to intervene and tell us what is to be done. We cannot go on cross-examining even the Chair. At this rate, who else can give a decision. This is an occasion where the leader should intervene.

Sri J. B. MALLARADHYA.— I very strongly protest against the use of the words 'waste of time'. If this gentleman cannot understand that this is a matter concerning the procedure of the Hon'ble House, what is he here for? At every stage he is making provocative statements. Yesterday he was indulging in raising an objection when the Secretary was speaking to the Whip on this side. That shows his small-mindedness.

(*Several Members rose*)

Mr. CHAIRMAN.—Why so much interruptions ? I cannot under stand.

(Sri V. P. Deenadayalu Naidu *rose*)

Sri C. M. ARUMUGHAM.— The Speaker was on his legs to give a ruling and when Sri Deenadayalu Naidu interrupted. How can he say that the Speaker is wasting the time of the House ?

Sri B. D. JATTI.— When the rules are very clear, there is no point in raising a point of order for everything. The business of the House has to be carried smoothly. If so many members, whether it be from this or the other side, begin to cross-examine, it is not possible for us to carry on. If Members want to raise a point of order, one after another should speak. They should not create confusion.

Sri C. J. MUCKANNAPPA.— No ruling has been given on the point of order raised by me. Hon'ble Speaker had previusly given a ruling that a member is not entitled to change from one language to another in the same speech. I wanted to know whether the Agricultural Minister can change his language mid-stream.

Mr. CHAIRMAN.— I would like to clarify my stand, Sri Muckannappa wanted to say something when Sri Arumugham and the Minister were standing. Sri Arumugham wanted to iterrupt. When Sri Muckanappa got up, his intention was not to raise a point of order. He wanted some clarification. My intention was not to curb the rights of any Hon'ble Member here. If there are any points of orders, the Chair ought to give a chance and then give its ruling. In this case, Sri Rachiah started in Kannada but he wanted to clarify certain points raised by Sri B. Shamsundar. He himself said that he was changing the language from Kannada to English. It is a convention to ask the Chair in such circumstances.

Sri J. B. MALLARADHYA.— My point of order is different. I wanted to know whether the Chair can indulge in that kind of statement saying: if your point of order is not correct, I would not allow you to speak again.

Mr. CHAIRMAN.— I have just now clarified the position. When Sri Muckannappa first got up, his mood was not to raise a point of order. When Sri Muckannappa realised that the Chair and the Minister would not yield to him for obtaining a clarification, he came forward saying that he was going to raise a point of order. How can he change his idea like that? If he had a point of order, he should have stated so in the first instance itself. If Sri Mallaradhya wants to raise a point of order, I will certainly give him a chance.

Sri J. B. MALLARADHYA.— My point of order is not quite the same. I asked if it is open to the Chair to take up the position, even when a wrong point of order is raised. You can say there is no point of order, of course.

Mr. CHAIRMAN.— Why so much of discussion on this. There is nothing in it.

ಶ್ರೀ ಎನ್. ರಾಚಯ್ಯ.— ಅದೇ ರೀತಿಯಲ್ಲಿ ಬಿದರೆ ಜಿಲ್ಲೆಯಲ್ಲಿಯೂ ಕೂಡ 60 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಹಾಸ್ಟಲನ್ನು ಕಟ್ಟಲು ಕಳೆದ ಜನವರಿ ತಿಂಗಳಲ್ಲಿ ನಾನೇ ಫೌಂಡೇಷನ್ ಸ್ಟೋನ್ ಹಾಕಿ ಬಂದಿದ್ದೇನೆ. ಹೈದರಾಬಾದಿನ ಕರ್ನಾಟಕದಲ್ಲಿಯೂ ಕೂಡ ಸುಮಾರು 3 ಜಿಲ್ಲೆಗಳಲ್ಲಿ ನಾವು ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಸಾಕಷ್ಟು ಹಣವನ್ನು ಮಂಜೂರು ಮಾಡಿದ್ದೇವೆ. ಕೆಲವು ಕಡೆ 40 ಸಾವಿರ ರೂಪಾಯಿಗಳಲ್ಲಿ ಕಟ್ಟಡ ಆಗುವುದರಲ್ಲಿದೆ. ಕೆಲವು ಕಟ್ಟಡಗಳು ಈಗಾಗಲೇ ಅಲ್ಲಿ ರೂಫಿಂಗ್ ಲೆವಲ್ಲಿಗೆ ಬಂದಿದೆ. ಶ್ರೀಮಾನ್ ಶ್ಯಾಮಸುಂದರ್ ಅವರು ಮಾಗಡಿ ರೋಡಿನಲ್ಲಿ ಯಾವುದೋ ಒಂದು ಹಾಸ್ಟಲಿಗೋಸ್ಕರ ವಿಶೇಷವಾಗಿ ಹಣ ಕೊಟ್ಟಿದ್ದಾರೆ. ಅಲ್ಲಿ 170 ಮಂದಿಗಿಂತಲೂ ಜಾಸ್ತಿ ವಿದ್ಯಾರ್ಥಿಗಳು ಇಲ್ಲ ಎಂದರು. ಆ ಕಡೆಯಲ್ಲಿ 500 ಜನರು ಸೇರುವುದಕ್ಕೆ ಅವಕಾಶವಿದೆ ಎಂದು ನಾನು ಹೇಳುತ್ತೇನೆ. ಕೋಲಾರ ಟೌನಿನಲ್ಲಿ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 378 ಸಾವಿರ ರೂಪಾಯಿ

ಗಳನ್ನು ಖರ್ಚುಮಾಡಿ ಒಂದು ಕಟ್ಟಡವನ್ನು ಕಟ್ಟಿಸಿದ್ದೇವೆ. ಅಲ್ಲಿ ಸಾಕಾದಷ್ಟು ಹುಡುಗರು ಇಲ್ಲ. ಅಂತಹ ಕಟ್ಟಡವನ್ನು ಏಕೆ ಕಟ್ಟಿಸಿದಿರಿ ಎಂದು ಕೇಳಿದರು. ನಾನು ಮಂತ್ರಿಯಾದಮೇಲೆ ಅಲ್ಲೂ ಕೂಡ ಆ ಸಂಖ್ಯೆಯನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಎಲ್ಲೆಲ್ಲಿ ಮಿಡಲ್ ಮತ್ತು ಹೈಸ್ಕೂಲುಗಳಿವೆಯೋ ಅಂತಹ ಕಡೆಗಳಲ್ಲಿ 2-3 ಹಾಸ್ಟಲುಗಳು ಕಟ್ಟಡವನ್ನು ಕಟ್ಟಿಸುವುದು ಅವಶ್ಯಕವೆಂಬುದಾಗಿ ಸರ್ಕಾರದವರು ಮನಗಂಡಿದ್ದಾರೆ. ಹರಿಜನ ಮಕ್ಕಳಿಗೆ ಪ್ರತಿಯೊಂದು ಜಿಲ್ಲೆಯಲ್ಲೂ ಹಾಸ್ಟಲಿನ ಸೌಕರ್ಯವಿದೆ. ಈಗ ಗುಲ್ಬರ್ಗದಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಮಾಡಿದ್ದೇವೆ. ರಾಯಚೂರ್, ಬಿದರೆಗಳಲ್ಲಿ ಕೆಲವು ಹಾಸ್ಟಲುಗಳನ್ನೂ, ಕಾಲೇಜುಗಳನ್ನೂ ಪಾಲಿಟೆಕ್ನಿಕಲ್ ಇನ್ಸ್ಟಿಟ್ಯೂಷನ್‌ಗಳನ್ನೂ ಕಟ್ಟಿಸಿಕೊಟ್ಟಿದ್ದೇವೆ. ಈಗ ಅಲ್ಲಿ ಒಂದು ಮೆಡಿಕಲ್ ಕಾಲೇಜ್ ಸಹ ಆಗುತ್ತದೆ. ಆದ್ದರಿಂದಲೇ ಈಗ ಎಲ್ಲೆಲ್ಲಿ ಮಿಡಲ್ ಮತ್ತು ಹೈಸ್ಕೂಲುಗಳಿವೆಯೋ ಅಲ್ಲೆಲ್ಲಾ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಕಟ್ಟಿಸುವವರಾಗಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಮೈಸೂರು ಜಿಲ್ಲೆಯಲ್ಲಿ ಮೊದಲನೆಯ ವರ್ಷದ 3 ನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 3 ಕಟ್ಟಡಗಳನ್ನು ಮಂಜೂರು ಮಾಡಿದ್ದೇವೆ. ಒಂದು ಮೈಸೂರಿನಲ್ಲಿ, ಇನ್ನೊಂದು ಕೃಷ್ಣಮೂರ್ತಿಪುರಂನಲ್ಲಿ, ಮತ್ತೊಂದು ಎರಡು ಲಕ್ಷ ರೂಪಾಯಿಗಳಲ್ಲಿ ನಂಜನಗೂಡು ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ. ಚಾಮರಾಜನಗರದಲ್ಲಿಯೂ ಮೊದಲನೆಯ ವರ್ಷದ 3 ನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 1,51,600 ರೂಪಾಯಿಗಳನ್ನು ಒಂದು ಹಾಸ್ಟಲ್ ಕಟ್ಟಡಕ್ಕಾಗಿ ಖರ್ಚು ಮಾಡಬೇಕೆಂದೂ ಅದನ್ನು ತಾಲ್ಲೂಕ್ ಹೆಡ್‌ಕ್ವಾರ್ಟರ್ಸಿನಲ್ಲಿಯೋ ಕಟ್ಟಬೇಕೆಂದು ಕೊಟ್ಟಿದ್ದೇವೆ. ಗುಲ್ಬರ್ಗಕ್ಕಾಗಲಿ ಅಥವಾ ಬಿದರ್‌ಗಾಗಲಿ ಒಂದು ಲಕ್ಷ, ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡಲಿಲ್ಲ ಎಂದರೆ ಇದು ನಮ್ಮ ನೀತಿಗೇನೂ ಅಷ್ಟು ವಿರುದ್ಧವಾದುದಲ್ಲ. ಈಗಾಗಲೇ ಕೆಲವು ಕಡೆ ಆದಿಜಾಂಬವ ಹಾಸ್ಟೆಲಿಗೆ ಹಣವನ್ನು ಮಂಜೂರು ಮಾಡಿಕೊಟ್ಟಿದ್ದೇವೆ. ನೆಲಮಂಗಲದಲ್ಲಿ ಒಂದು ಹಾಸ್ಟೆಲಿಗೆ 30 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿಕೊಡಲಾಗಿದೆ.

Sri B. SHAMSUNDAR.—Sir, my point is this. There are some hostels where there are only 30 or 40 students and to such hostels, you give one lakh of rupees and to hostels where there are more than 200 students, you have given only a few thousands. That is why this discrimination. That was the point. I will give one name. How much have you given to Chikkaballapur ? How many students are there ? I would like to have a statement of the hostels and number of inmates in each and the amount allotted and who is managing all these ? I will be very glad and I wil be thankful for it.

ಶ್ರೀ ಎನ್. ರಾಚಯ್ಯ.—ಚಿಕ್ಕಬಳ್ಳಾಪುರದಲ್ಲಿ ಒಂದು ಹಾಸ್ಟಲಿಗಾಗಿ 39 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿಕೊಟ್ಟಿದ್ದೇವೆ. ಈ ಹಾಸ್ಟಲುಗಳ ಪೈಕಿ 4ನ್ನು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರತಕ್ಕವುಗಳಾಗಿವೆ. ಮಾನ್ಯ ಸದಸ್ಯರಿಗೆ ಅಂಥ ಅನುಮಾನವೇನಾದರೂ ಇದ್ದರೆ ನನ್ನ ಛೇಂಬರಿಗೆ ಬರಲಿ—ನಾನು ಅವರಿಗೆ ನನ್ನ ಆಫೀಸಿನಲ್ಲಿರತಕ್ಕ ಸಂಪೂರ್ಣ ರೆಕಾರ್ಡುಗಳನ್ನೆಲ್ಲಾ ಅವರ ಎದುರಿಗಿಡುತ್ತೇನೆ. ನಾವು ಸಾಧ್ಯವಾದ ಮಟ್ಟಿಗೆ ಈ ಹಾಸ್ಟಲುಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಕೊಡಬೇಕೆಂದು ಮನಸ್ಸು ಮಾಡಿದ್ದೇವೆ. ಚಾಮರಾಜನಗರದಲ್ಲೊಂದು ಹಾಸ್ಟಲನ್ನು ಒಂದು ಲಕ್ಷ 57 ಸಾವಿರ ರೂಪಾಯಿಗಳಲ್ಲಿ ಕಟ್ಟಿಸಲಾಗಿದೆ. ಆದರೆ ಚಿಕ್ಕಬಳ್ಳಾಪುರದಲ್ಲಿ ಹೆಚ್ಚು ಹುಡುಗರು ಆ ಹಾಸ್ಟಲಿಗೆ ಸೇರತಕ್ಕ ಅವಕಾಶವಿದೆ. 500 ಹುಡುಗರ ತನಕ ಅಲ್ಲಿ ಸೇರುವ ನಿರೀಕ್ಷಣೆಯಿದೆ.

(ಶ್ರೀ ಎನ್. ರಾಚಯ್ಯ)

ಆದರೆ ಕೆಲವರು ಈ ಹಾಸ್ಟಲುಗಳನ್ನು ಕಟ್ಟತಕ್ಕ ಬಗ್ಗೆ ಅಂದಾಜು ಮತ್ತು ಪ್ಲಾನುಗಳನ್ನೂ ಕಳುಹಿಸಿಲ್ಲ. ಅಂಥವರಿಗೆ ನಾವು ನೇರವಾಗಿ ಈ ಗ್ರಾಂಟನ್ನು ಕೊಡುವುದಿಲ್ಲ. ಆ ಜನರಿಂದ ರೆಪ್ರಸೆಂಟೇಷನ್‌ಗಳು ಬಂದಮೇಲೇ ನಾವು ಅವರಿಗೆ ಈ ಗ್ರಾಂಟನ್ನು ಕೊಡುವುದು. ನಮ್ಮ ಹೊಣೆಗಾರಿಕೆಯಲ್ಲಿ ಇವುಗಳಿಗೆ ಬರೀ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಕೊಡುವುದೊಂದೇ ನಮ್ಮ ಪಾಲಿಗಿರುವುದು. ಈ ಕಾರ್ಯದಲ್ಲಿ ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ನೇರವಾಗಿ ಕೆಲಸಗಳನ್ನು ನಡೆಸುತ್ತಾರೆ. ಆದರೆ ಮಂಡ್ಯಾಜಿಲ್ಲೆಗೆ ಈ ಹಾಸ್ಟಲನ್ನು ಕಟ್ಟತಕ್ಕ ಬಗ್ಗೆ ಹಣವನ್ನಿನ್ನೂ ಕೊಟ್ಟಿಲ್ಲವೆಂದು ಹೇಳಿದರು. ಆದರೆ ಶ್ರೀ ಶಾಮಸುಂದರ್ ಅವರಲ್ಲಿ ಕಪಟವಿಲ್ಲ. ಅವರು ಇದ್ದುದನ್ನು ಬಹಿರಂಗದಲ್ಲಿ ಇದ್ದಂತೆಯೇ ಹೇಳಿಬಿಡುತ್ತಾರೆ. ಆದರೆ ಅಲ್ಲಿಯ ಯಾರೋ ಕೆಲವು ಜನರು ಈ ಹರಿಜನರನ್ನು ಇಬ್ಭಾಗ ಮಾಡಬೇಕೆಂತ ಇವರಿಗೆ ಈ ರೀತಿ ಹೇಳಿಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಅವರಿಗೆ ಬಂದ ವಿಚಾರಗಳೆಲ್ಲಾ ನಿಜವೆಂತಲೇ ಭಾವಿಸಿರುವಂತೆ ಕಾಣುತ್ತಿದೆ. ಮಾನ್ಯ ಸದಸ್ಯರ ಅನುಮಾನ ಪರಿತ್ಯಾಗಕ್ಕಾಗಿ ನಾನೀಗ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಸೂಕ್ಷ್ಮವಾಗಿ ತಿಳಿಸಬೇಕಾಗಿದೆ. ಮಾನ್ಯ ಶ್ಯಾಮಸುಂದರ್ ಅವರು ಮಾತನಾಡುತ್ತ ಅವರು ''ನಿಮ್ಮ ಕಡೆಯವರೇ ನನಗೆ ಈಗ ಇನ್‌ಫರ್‌ಮೇಷನ್ ಕೊಟ್ಟಿದ್ದಾರೆಂದು'' ಹೇಳಿದರು. ಅವರು ಹೇಳಿದುದನ್ನೇ ನಾನೀಗ ಹೇಳುತ್ತಿದ್ದೇನೆ. ನಾವು ಮೊಟ್ಟಮೊದಲನೆಯದಾಗಿ ಮಂಡ್ಯಾದಲ್ಲಿ ಒಂದು ಹಾಸ್ಟಲನ್ನು ಕಟ್ಟಲು ಒಂದು ಲಕ್ಷ 7 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆವು. ಮಂಡ್ಯದಲ್ಲಿ ಒಕ್ಕಲಿಗರ ಹಾಸ್ಟಲಿನ ಹತ್ತಿರ ಇರುವ ಜಾಗದಲ್ಲಿ ಈ ಒಂದು ಹಾಸ್ಟಲನ್ನು ಕಟ್ಟಬೇಕೆಂದು ಪ್ರಯತ್ನಮಾಡಲಾಗಿತ್ತು. ಆದರೆ ಆ ಜಮೀನು ಅಲ್ಲಿ ಒಬ್ಬ ಬಲಯುತವಾದ ವ್ಯಕ್ತಿಯ ಕೈಲಿದೆ. ಆ ಜಾಗವನ್ನು ಆ ವ್ಯಕ್ತಿ ತನ್ನ ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಪ್ರಯತ್ನಗಳು ನಡೆಯುತ್ತಿದ್ದವು. ಆಗ ನಾನು ನೇರವಾಗಿ ಜಿಲ್ಲಾಧಿಕಾರಿಗಳನ್ನು ಕರೆಸಿ ಆ ಪಾರ್ಟಿಯ ಒಪ್ಪಿಗೆಯನ್ನು ಪಡೆದು ಆ ಸೈಟನ್ನು ಸರ್ಕಾರದವರ ಸುಪರ್ದು ತೆಗೆದುಕೊಳ್ಳಬೇಕೆಂದು ಹೇಳಿದೆ. ಆದರೆ ಆ ಪಾರ್ಟಿ ಒಪ್ಪಿಗೆಯನ್ನು ಸಕಾಲದಲ್ಲಿ ಪಡೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಅಲ್ಲಿ ಆ ಕಟ್ಟಡದ ಕೆಲಸ ನಿಧಾನವಾಯಿತು. ಹಾಗೇನೂ ಅಡಚಣೆ ಬಾರದಿದ್ದರೆ ಇದುವರೆಗಾಗಲೇ ಅಲ್ಲಿ ಕಟ್ಟಡ ಅರ್ಧಮರ್ಧ ಆಗಲೇಬೇಕಾಗಿತ್ತು. ಕೆಲವು ಕಡೆ ಇಂಥ ಎಡರು ತೊಡರುಗಳಿಂದ 3-4 ವರ್ಷಗಳ ಡಿಲೇ ಆಗಿರಬಹುದು. ಇನ್ನು ಕೆಲವು ಕಡೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಮಂಜೂರಾದ ಕೆಲಸಗಳ ಬಗ್ಗೆ ರಿವೈಸ್ಡ್ ಎಸ್ಟಿಮೇಟ್‌ಗಳು ಬರುವುದು ನಿಧಾನವಾಗಿರುತ್ತೆ. ಆದ್ದರಿಂದ ಕೊಂಚ ಡಿಲೇ ಆಗಿರುತ್ತೆ. ಇಷ್ಟು ಹೊರತು ನಾವು ಯಾರೊಬ್ಬರ ಪ್ರಭಾವಕ್ಕೂ ಒಳಗಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಕಡೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುತ್ತೆ. ಅಂಥ ಕಡೆಗಳಲ್ಲಿ ಆ ಮಕ್ಕಳ ವಿದ್ಯಾಭಿವೃದ್ಧಿಗೆ ಸೂಕ್ತವಾದ ಹಾಸ್ಟಲ್, ಸ್ಕಾಲರ್‌ಷಿಪ್, ಇತ್ಯಾದಿಗಳನ್ನೆಲ್ಲಾ ನಾವು ಕೊಡುತ್ತಿದ್ದೇವೆ. ಆದರೆ ಶ್ರೀ ಶ್ಯಾಮಸುಂದರ್ ಅವರು ಕೆಲವು ಕಡೆ ಈ ಅನುಕೂಲಗಳು ದೊರೆಯಲಿಲ್ಲ ಎಂದು ಹೇಳಿದ್ದಾರೆ. ಅಂಥ ನಿದರ್ಶನಗಳ್ಯಾವಾದರೂ ಇದ್ದಲ್ಲಿ ಅವುಗಳನ್ನು ನನ್ನ ಗಮನಕ್ಕೆ ತಂದರೆ ಅದನ್ನು ಕೂಡಲೇ ಸರಿಪಡಿಸುತ್ತೇನೆ. ಆದರೆ, ಯಾರೇ ಆಗಲೀ ಆಧಾರ ರಹಿತವಾದ ಟೀಕೆಗಳನ್ನು ಮಾಡಿದರೆ ಅದನ್ನು ನಾನು ಉಗ್ರವಾಗಿ ಪ್ರತಿಭಟಿಸುತ್ತೇನೆ. ರಚನಾತ್ಮಕ ಟೀಕೆಗಳೆಲ್ಲಕ್ಕೂ ನಾನು ಮಾನ್ಯತೆ ಕೊಡುತ್ತೇನೆ. ನಾವು ಈ ಹಾಸ್ಟಲುಗಳ ವಿಚಾರದಲ್ಲಿ ಯಾವುದನ್ನೂ ನೇರವಾಗಿ ನಡೆಸುತ್ತಿರಲಿಲ್ಲ. ಇವುಗಳ ಆಡಳಿತವೆಲ್ಲ ಆಯಾಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೊಪ್ಪಿಸಲಾಗಿದೆ. ಜೊತೆಗೆ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಸೂಪರ್‌ವಿಷನ್ ಬೇರೆ ಇದೆ. ಇವರಿಂದ ಬರತಕ್ಕ ಶಿಫಾರಸ್ಸುಗಳ ಮೇಲೆ ನಾವು ಟ್ರೆಜರಿಯಿಂದ ಹಣ ಪಾವತಿ ಮಾಡುವಂತೆ ಏರ್ಪಾಡು ಮಾಡಿದ್ದೇವೆ.

ಅವರು ಇವರು ಕಳುಹಿಸತಕ್ಕ ಪ್ಲಾನು, ಅಂದಾಜು, ಇತ್ಯಾದಿ ಲೆಕ್ಕಗಳನ್ನೆಲ್ಲ ಚೆಕ್ ಮಾಡಿ ಹಣ ಕೊಡುತ್ತಾರೆ. ಹೀಗೆ ಪ್ರತಿಯೊಂದು ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಕಟ್ಟಿಸಿರತಕ್ಕ ಈ ಹಾಸ್ಟಲುಗಳ ಆಡಳಿತಕ್ಕೆ ಅಲ್ಲಲ್ಲೇ ಒಂದು ಪ್ರತ್ಯೇಕ ಇಲಾಖೆಯಿರುತ್ತೆ. ಈ ವಿಚಾರ ಗಳನ್ನೆಲ್ಲಾ ನಾವು ಕಾನೂನಿನ ಪ್ರಕಾರವೇ ನಡೆಸಿರುತ್ತೇವೆ. ಈ ವಿಚಾರದಲ್ಲಿ ಖಾಸಗಿಯವರು ಯಾರಾದರೂ ಮುಂದೆ ಬಂದು ಹರಿಜನರ ಹಾಸ್ಟಲುಗಳನ್ನು ಕಟ್ಟಿಸುತ್ತೇವೆಂತ ಹೇಳಿದರೆ ಅಂಥವ ರಿಗೆ ಸರ್ಕಾರದ ನೀತಿ-ನೇಮಗಳಿಗನುಗುಣವಾಗಿ ಸಹಾಯವನ್ನು ಕೊಡುತ್ತೇವೆ. ಇಲ್ಲಿಯವರೆಗೆ ಇಂಥ ಸಹಾಯಗಳನ್ನು ಕೊಟ್ಟೂ ಇದ್ದೇವೆ. ಹಾಗೆ ಯಾರಾದರೂ ಸರ್ಕಾರದ ಸಹಾಯ ನಮಗೆ ಕೊಡಲಿಲ್ಲವೆಂತ ಆರೋಪಣೆ ಮಾಡುವುದಿದ್ದರೆ ತಿಳಿಸಿ, ಅದಕ್ಕೆ ನಾನು ಜವಾಬ್ ಕೊಡುತ್ತೇನೆ.

ಆದರೆ ನಾವೀಗ ಈ ಹರಿಜನರನ್ನು ಉತ್ತಮ ಸ್ಥಿತಿಗೆ ತರಲು ಮತ್ತೊಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದನ್ನೀಗ ನಾನು ತಮ್ಮ ಮುಂದಿಡಲು ಸಂತೋಷ ಪಡುತ್ತೇನೆ. ಈ ಹರಿಜನರ ಅಭಿವೃದ್ಧಿಗಾಗಿ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ 296 ಲಕ್ಷ ರೂಪಾಯಿ ಮೀಸಲಾಗಿಡಲಾಗಿತ್ತು. ಈಗ ಮೂರನೇ ಯೋಜನೆಯಲ್ಲಿ ಈ ಹರಿಜನಾಭಿವೃದ್ಧಿಗಾಗಿ 440 ಲಕ್ಷ ರೂಪಾಯಿಗಳನ್ನಿಟ್ಟಿದ್ದೇವೆ. ಇಲ್ಲಿಯತನಕ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು 400 ರೂ. ರೂಗಳ ಗ್ರಾಂಟನ್ನು ಕೊಡತಕ್ಕ ಒಂದು ಪದ್ಧತಿಯಿತ್ತು. ಈ ಪದ್ಧತಿಯನ್ನು ತಾ|| 1–4–1961ರಿಂದ ರದ್ದುಪಡಿಸಲಾಗುತ್ತದೆ. ಇನ್ನುಮುಂದೆ ಈ ನಿರ್ಗತಿಕರಾದ ಯಾವ ಹರಿಜನರೇ ಆಗಲಿ, ಅವರು ವ್ಯವಸಾಯೋದ್ಯಮವನ್ನು ಕೈಗೊಳ್ಳುವುದಾದರೆ ಸರ್ಕಾರ ಅವರಿಗೆ ಕೊಡತಕ್ಕ ಜಮೀನನ್ನು ಕೊಡುವುದೊಂದೇ ಅಲ್ಲದೇ ಅದರ ಜೊತೆಗೆ ಅವರು ಆ ಜಮೀನಿನಲ್ಲೇ ಒಂದು ವಾಸದ ಮನೆಯನ್ನು ಕಟ್ಟಿಕೊಳ್ಳಲು ಇಲ್ಲಿಯತನಕ ಕೊಡಲಾಗುತ್ತಿದ್ದ 400 ರೂ.ಗಳ ಗ್ರಾಂಟಿಗೆ ಬದಲು 500 ರೂ. ಗಳ ಗ್ರಾಂಟನ್ನು ಕೊಡಬೇಕೆಂಬುದೇ ಈಗಿನ ಸರ್ಕಾರದ ನೀತಿ ಆಗಿದೆ. ಹೀಗೆ ಇನ್ನುಮುಂದೆ ಈ ಬಡ ಜನರಿಗೆ 500 ರೂಗಳ ಮನೆ ಗ್ರಾಂಟು ವ್ಯವಸಾಯಕ್ಕೆ ಜಮೀನು, ಸೆಂಟರಿನಿಂದ ಸಹಾಯ ಬರತಕ್ಕ ಸ್ಕೀಮಿನಿಂದ ಇವರಿಗೆ ಎತ್ತುಗಳು, ಇವರು ಒಂದು ಕೋ-ಆಪರೇಟಿವ್ ಫಾರಂ ಮಾಡಿಕೊಂಡು ಜೀವನ ಮಾಡುವುದಾದರೆ ಈ ಇಲಾಖೆಯಿಂದಲೂ ಇವರಿಗೆ ವ್ಯವಸಾಯೋದ್ಯಮದ ಬಗ್ಗೆ ಏನೇನು ಸೌಲಭ್ಯಗಳನ್ನೊದಗಿಸಬಹುದೋ ಆ ಅನು ಕೂಲತೆಗಳನ್ನೆಲ್ಲಾ ಕೊಡಲಾಗುತ್ತದೆ. ಇದರ ಜೊತೆಗೆ ಇವರು ಸಾಲದ ರೂಪದಲ್ಲೂ ಹಣ ಪಡೆಯಲು ಅವಕಾಶವಿರುತ್ತೆ. ಅಂತೂ ಒಟ್ಟಿನಲ್ಲಿ ಇವರ ಅಭಿವೃದ್ಧಿಗಾಗಿ ಇನ್ನುಮುಂದೆ 400 ರೂ.ಗಳ ಗ್ರಾಂಟನ್ನು ನಿಲ್ಲಿಸಿ ಈ ಜನಾಂಗಕ್ಕೆ 1500 ರೂಗಳಿಂದ 3000 ರೂ.ಗಳ ತನಕ ಸಹಾಯವನ್ನು ಕರಡು ರೂಪದಲ್ಲಿ ಒದಗಿಸಲಾಗುತ್ತೆ. ಇದರ ಜೊತೆಗೆ ಈಗ ಇರತಕ್ಕ ಲೋ ಇನ್ಕಂ-ಮಿಡಲ್ ಕ್ಲಾಸಿನ ಜನರಿಗೆ ಹೌಸಿಂಗ್ ಸ್ಕೀಂ ಅಂತ ಏನು ಒಂದು ಯೋಜನೆಯನ್ನು ಮಾಡಿದೆಯೋ ಅದೇ ರೀತಿ ಹರಿಜನರಿಗೂ ಒಂದು ಹರಿಜನರ ಹೌಸಿಂಗ್ ಸ್ಕೀಂ ಅಂತ ಮಾಡಿ ದ್ದೇವೆ. ಇವರು ಈ ಎರಡು ಯೋಜನೆಗಳಲ್ಲೂ ಅನುಕೂಲ ಪಡೆಯಬಹುದು. ಹರಿಜನ ಹೌಸಿಂಗ್ ಸ್ಕೀಂ ಎಂದು ಏನು ಮಾಡಿದೆಯೋ ಅದಕ್ಕೆ ಇನ್ನೂ ಹೆಚ್ಚು ಹಣ ಕೊಡಬೇಕಾಗಿದೆ. ಇಂಥಾದ್ದಕ್ಕೆ ಸಾಲದ ರೂಪದಲ್ಲಿ ಹಣ ಒದಗಿಸುತ್ತೇವೆ. ಆದರೆ ಗ್ರಾಂಟ್ ಎಂದು ಕೊಡುವುದಿಲ್ಲ. ಯಾಕೆಂದರೆ ಸರಕಾರದ ಮೇಲೆ ಯಾವದೇ ರೀತಿಯ ಆಕ್ಷೇಪಣೆ ಬರಬಾರದು ಎಂದು ಹೀಗೆ ಮಾಡಿದೆ.

Sri C. M. ARUMUGHAM—Is this only a State Policy or an all India Policy? Are you directed by the Home Ministry of the Government of India or is this only a State Policy?

ಶ್ರೀ ಎಚ್. ರಾಚಯ್ಯ.—ಕಳೆದ ಅಕ್ಟೋಬರ್ ತಿಂಗಳಿನಲ್ಲಿ 24 ರಿಂದ 28 ನೇ ತಾರೀಖಿನ ವರೆಗೆ ಎಲ್ಲ ಸ್ಟೇಟ್ ಮಿನಿಸ್ಟರ್ಸ್ ಬ್ಯಾಕ್‌ವರ್ಡ್ ಕ್ಲಾಸ್ ಮಿನಿಸ್ಟರ್ಸ್ ಒಂದು ಸಭೆ ನಡೆಯಿತು. ಅದರಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕ್ಕೋಸ್ಕರ ಹೆಚ್ಚಿನ ಭಾಗ ಹಣವನ್ನು ಒದಗಿಸಬೇಕು. ಅದರಲ್ಲಿಯೂ ಅರ್ಧದಷ್ಟು ಹಣವನ್ನು ಹಾಸ್ಟೆಲ್ ಕಟ್ಟಡ, ಟೆಕ್ನಿಕಲ್ ಟ್ರೇನಿಂಗ್ ಕೊಡುವುದಕ್ಕೆ ಖರ್ಚು ಮಾಡಬೇಕೆಂದು ತೀರ್ಮಾನಿಸ ಲಾಗಿದೆ. ಪ್ಲಾನಿಂಗ್ ಕಮಿಷನ್ ಅವರು ಸಹ ಇದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಸರ ಕಾರ ಈ ರೀತಿ ಮಾಡುತ್ತಿದೆ.

ಇನ್ನು ಹೌಸಿಂಗ್ ವಿಚಾರದಲ್ಲಿ ಬೇರೆ ರಾಜ್ಯಗಳಲ್ಲಿ ಗ್ರಾಂಟ್ ಕೊಡುತ್ತಿರಬಹುದು. ಮೊದಲು ಉದ್ಯೋಗ ಕಲ್ಪಿಸಬೇಕಾಗುತ್ತದೆ. ಹೊಟ್ಟೆಗೆ ಅನ್ನ ನೀರು ಒದಗಿಸುವ ವ್ಯವಸ್ಥೆ ಆದ ಮೇಲೆ ವಿದ್ಯಾಭ್ಯಾಸ ಬರುತ್ತದೆ. ಇದು ಆದ ಮೇಲೆ ಮನೆ ಬೇಕಾಗುತ್ತದೆ. ಎಲ್ಲರೂ ಮನೆಗಳನ್ನು ಕಟ್ಟುವದಕ್ಕೆ ಸೈಟುಗಳನ್ನು ಪಟ್ಟಣಗಳಲ್ಲಿಯೇ ಕೇಳುವುದು ಸರಿಯಲ್ಲ. ಗ್ರಾಮಾಂತರ ಪ್ರದೇಶಗಳಲ್ಲ ಹಳ್ಳಿಗಳಲ್ಲಿ ಹರಿಜನರಿಗೆ ಮುಫತ್ತಾಗಿ ಸೈಟು ಕೊಡುತ್ತೇವೆ. ಅಲ್ಲಿ ಮನೆಗಳನ್ನು ಕಟ್ಟಿಸಬಹುದು. ಈ ಸಾಲದ ಹಣವನ್ನು 20 ವರ್ಷಗಳಲ್ಲಿ ವಾಪಸ್ ಕೊಡಬಹುದು. ಸಾಮಾನ್ಯವಾಗಿ 5 ಪರ್ಸೆಂಟ್ ಬಡ್ಡಿ ತೆಗೆದುಕೊಳ್ಳುತ್ತಾರೆ. ಆದರೆ ಇವರಿಗೆ ಶೇಕಡ 2 ರಷ್ಟು ಬಡ್ಡಿ ಕೊಡಬೇಕಾಗುತ್ತದೆ. ಉಳಿದ ಶೇಕಡ 3 ರಷ್ಟು ಬಡ್ಡಿಯನ್ನು ಸಮಾಜ ಕಲ್ಯಾಣ ಇಲಾಖೆಯವರು ಕೊಡುತ್ತಾರೆ. ಒಂದು ಮನೆಗೆ 400 ರೂಪಾಯಿ ಕೊಡುವ ಪದ್ಧತಿ ಇಟ್ಟುಕೊಂಡಿದ್ದಾರೆ. ಈ ಬಗ್ಗೆ ಬೊಂಬಾಯಿ-ಕರ್ನಾಟಕ ಪ್ರದೇಶದಲ್ಲಿ ಒಂದು ಒಳ್ಳೇ ಯೋಜನೆ ಮಾಡಿದ್ದಾರೆ. ಅದು ಯೋಗ್ಯವಾಗಿದೆ. ಅರ್ಧ ಭಾಗದಷ್ಟು ಹಣವನ್ನು ಕೈಗಾರಿಕೆಗೆ, ಆರ್ಥಿಕ ಅಭಿವೃದ್ಧಿಗೆ ಉಪಯೋ ಗಿಸಬೇಕಾಗಿದೆ. ಇದು ಅತ್ಯಂತ ಮಹತ್ವಪೂರ್ಣವಾಗಿದೆ. ಕೈಗಾರಿಕೆಗಳ ಅನುಕೂಲ ಒದಗಿಸಿ ಕೊಟ್ಟು, ಅವರಿಗೆ ಉದ್ಯೋಗ ಕಲ್ಪಿಸಿ ಕೊಟ್ಟು, ನಿಜವಾಗಿಯೂ ಅವರ ಉದ್ಧಾರವಾಗಬೇಕಾ ದರೆ ಪ್ರತಿಯೊಬ್ಬ ಹಿಂದುಳಿದವನ ವರಮಾನ ಹೆಚ್ಚಾಗಬೇಕು. ಸರಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ.

ಇದೂ ಅಲ್ಲದೆ ಪಟ್ಟಣಗಳಲ್ಲಿ ಜಾಗಗಳನ್ನು ಮುಫತ್ತಾಗಿ ಕೊಡುವುದಿಲ್ಲ. ಈ ಸಾಲದ ಹಣವನ್ನು ಕಡಿಮೆ ಬಡ್ಡಿ ದರದಿಂದ ಕಂತುಗಳಲ್ಲಿ ವಾಪಸ್ ಕೊಡುವಂತೆ ಒಂದು ವ್ಯವಸ್ಥೆ ಮಾಡ ಲಾಗಿದೆ. ಒಟ್ಟಿನಲ್ಲಿ ಹರಿಜನರ ಅಭಿವೃದ್ಧಿಯಾಗುವುದಕ್ಕೆ ಒಳ್ಳೇ ತೀರ್ಮಾನ ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಸಾಧಿಸಿದ ಪ್ರಗತಿಗಿಂತ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮೂರನೇ ಯೋಜನೆಯ ಅವಧಿಯಲ್ಲಿ ಪ್ರಗತಿ ಸಾಧಿಸುತ್ತೇವೆ. ಆರ್ಥಿಕ ಅಭಿವೃದ್ಧಿಯ ಕಡೆಗೆ ಸಾಕಷ್ಟು ಗಮನ ಕೊಡ ಲಾಗುವುದು. ಅನೇಕ ಸದಸ್ಯರು ಆಧಾರ ರಹಿತವಾದ ಟೀಕೆ ಮಾಡಿದ್ದಾರೆ. ಅದನ್ನು ತೀವ್ರ ವಿರೋಧಿಸುತ್ತೇನೆ. ಅವರು ಸೂಚಿಸಿದ ಪ್ರಕಾರ ಒಂದು ಕಮಿಟಿಯನ್ನು ನೇಮಕ ಮಾಡುವ ಪ್ರಮೇಯವೇನೂ ಇಲ್ಲ. ಕೊನೆಯದಾಗಿ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸಬೇ ಕೆಂದು ಹೇಳುತ್ತೇನೆ.

†ಶ್ರೀ ಎಚ್. ಎಂ. ಚನ್ನಬಸಪ್ಪ (ಗೃಹಶಾಖೆ ಮಂತ್ರಿಗಳು).—ಅಧ್ಯಕ್ಷರೇ, ನನಗೆ ಸಂಬಂಧ ಪಟ್ಟ ಇಲಾಖೆಯ ಬಗ್ಗೆ ಅಷ್ಟು ತೀವ್ರವಾಗಿ ಆರೋಪಣೆ, ತಾತ್ವಿಕ ಟೀಕೆ-ಟಿಪ್ಪಣಿಗಳು ಹೆಚ್ಚಾಗಿ ಈ ಸಭೆಯ ವಿರೋಧ ಪಕ್ಷದಿಂದ ಬಾರದೇ ಇದ್ದುದರಿಂದ ಸ್ವಲ್ಪಮಟ್ಟಿಗೆ ಸಂತೋಷವ ನ್ನುಂಟುಮಾಡಿದೆ. ಮೂರು ಮುಖ್ಯ ವಿಷಯಗಳನ್ನು ಮಾತ್ರ ಕೆಲವು ಮಾನ್ಯ ಸದಸ್ಯರು ಸರಕಾರದ ಗಮನಕ್ಕೆ ತಂದಿದ್ದಾರೆ. ಆಡಳಿತದಲ್ಲಿ ದಕ್ಷರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಿದೆ. ಎರಡನೆಯದಾಗಿ ಕರಪ್ಷನ್ ಬಗ್ಗೆ ಟೀಕೆ ಮಾಡಿದ್ದಾರೆ. ಮೂರನೇದು ಪ್ರೊಹಿಬಿಷನ್ ಕಾರ್ಯ ಕ್ರಮದ ಬಗ್ಗೆ ಪ್ರಸ್ತಾಪ ಮಾಡಿ ಅದನ್ನು ತಡೆಗಟ್ಟತಕ್ಕಂಥಾದ್ದು ಅಷ್ಟು ಚೆನ್ನಾಗಿ ನಡೆಯು

ತ್ತಿಲ್ಲ, ಪಾನನಿರೋಧ ಯಶಸ್ವಿಯಾಗಿ ನಡೆಯುತಿಲ್ಲ ಎಂದು ಟೀಕೆ ಮಾಡಿದ್ದಾರೆ. ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡಿಲ್ಲ ಎಂದು ಸಹ ಹೇಳಿದ್ದಾರೆ. ಇಂಥ ಮೂರು-ನಾಲ್ಕು ವಿಷಯಗಳು ಮಾತ್ರ ಪ್ರಸ್ತಾಪ ಮಾಡಲಾಗಿದೆ. ಇತರ ವಿಷಯಗಳ ಬಗ್ಗೆ ವಿವರವಾಗಿ ಹೇಳುವುದು ಅನಗತ್ಯ. ಮುಖ್ಯ ವಿಷಯಗಳ ಬಗ್ಗೆ ಸರಕಾರದ ನೀತಿ ಏನಿದೆ, ಎಷ್ಟರಮಟ್ಟಿಗೆ ಕಾನೂನು ಪರಿಪಾಲನೆಯಾಗುತ್ತಿದೆ, ಲೋಪದೋಷಗಳು ಇದ್ದುದಾದರೆ ಅವುಗಳನ್ನು ಸರಿಪಡಿಸುವುದೆ ಹೇಗೆ, ಇಂಥ ವಿಚಾರಗಳಲ್ಲಿ ಸಾರ್ವಜನಿಕರ ವಿರೋಧಿ ಪಕ್ಷದ ಸದಸ್ಯರ ಕರ್ತವ್ಯವೇನು, ನಮ್ಮ ಕರ್ತವ್ಯ ಏನು, ಎಂಬ ಬಗ್ಗೆ ಪ್ರಸ್ತಾಪ ಮಾಡಿ ಹೇಳಬೇಕೆಂದಿದ್ದೇನೆ.

5-30 P.M.

ಮೊದಲನೆಯದು ತಕ್ಸೀರುಗಳ ಸಂಖ್ಯೆ ಜಾಸ್ತಿಯಾಗುತ್ತಿದೆಯೆಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಸತ್ಯವಿದೆ; ಸ್ವಲ್ಪ ಅಸತ್ಯವೂ ಇದೆ. ಡಕಾಯಿತಿ ಮತ್ತು ರಾಬರಿ ಇವೆರಡು ತಕ್ಸೀರುಗಳೂ ಕಡಿಮೆಯಾಗುತ್ತಿವೆ. ಡಕಾಯಿತಿಗಳು ಮೂರು ವರ್ಷದ ಕೆಳಗೆ 122 ಇದ್ದುದು ಈಗ 90 ಕ್ಕೆ ಇಳಿದಿದೆ; ಮತ್ತು ರಾಬರಿ 251 ಇದ್ದುದು 140 ಕ್ಕೆ ಬಂದಿದೆ. Murder (ಕೊಲೆ ಮಾಡತಕ್ಕದ್ದು) House-breaking, cattle theft ಮತ್ತು ordinary thefts ಎಂದು ಏನಿದೆ, ಇವು ಒಂದೇ ಸಮನಾಗಿವೆ. ಸ್ವಲ್ಪ ಹೆಚ್ಚು ಕಡಿಮೆ constant ಆಗಿದೆ. ತಕ್ಸೀರುಗಳು ಹೆಚ್ಚಾಗಿರುವುದು ಪಾನನಿರೋಧ ಸಂಬಂಧವಾಗಿ ಮತ್ತು ಮೋಟಾರುವಾಹನಗಳ ವಿಧೇಯಕದ ಸಂಬಂಧವಾಗಿ ಮಾತ್ರ. ಪಾನನಿರೋಧ ಸಂಬಂಧದಲ್ಲಿ ಸುಮಾರು 55 ಸಾವಿರವಿದ್ದುದು ಈ ವರ್ಷ 77,400 ಆಗಿದೆ. ಮತ್ತು Motor Vehicles' Act ಸಂಬಂಧದಲ್ಲಿ 41 ಸಾವಿರವಿದ್ದುದು 76 ಸಾವಿರಕ್ಕೆ ಏರಿದೆ. ಈ ಬಾಬುಗಳಲ್ಲಿ ತಕ್ಸೀರು ಹೆಚ್ಚಾಗಿದೆ ಎನ್ನುವ ವಿಷಯವನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ತಕ್ಸೀರುಗಳು ಹೆಚ್ಚಾಗಲು ಏನು ಕಾರಣ! ಇವುಗಳನ್ನು ತಡೆಗಟ್ಟತಕ್ಕ ಬಗೆ ಹೇಗೆ, ದೇಶದಲ್ಲಿ ಶಾಂತಿ-ಸಮಾಧಾನಗಳನ್ನು ಬಡವನ ಮನೆಯ ಬಾಗಿಲಲ್ಲಿ ಕೊಡುವುದು ಹೇಗೆ, ದೇಶದಲ್ಲಿ ನೀತಿ-ನಿಯಮಗಳನ್ನು ಪಾಲಿಸತಕ್ಕ ಬಗೆ ಹೇಗೆ, ಶಾಶನಗಳ ಉಲ್ಲಂಘನೆ ಮಾಡುವುದನ್ನು ತಡೆಗಟ್ಟುವುದು ಹೇಗೆ—ಇವೆಲ್ಲವನ್ನೂ ಸ್ವಲ್ಪ ಮಟ್ಟಿಗೆ ಸ್ಥೂಲವಾಗಿ ನಾವೂ—ನೀವೂ ಕೂಡಿ ವಿಚಾರ ಮಾಡಬೇಕು. ಮಾನ್ಯ ಸದಸ್ಯರು ನಮ್ಮ ಪ್ರದೇಶಗಳಲ್ಲಿ ರಸ್ತೆಗಳಾಗಿಲ್ಲ, ಸ್ಕೂಲುಗಳಿಲ್ಲ, ಆಸ್ಪತ್ರೆಗಳಾಗಿಲ್ಲ ಎಂದು ಆರೋಪ ಮಾಡತಕ್ಕದ್ದು ಒಂದು ರೀತಿ. ಅವಕ್ಕೆಲ್ಲ ಸರ್ಕಾರ ನೇರವಾಗಿ ಉತ್ತರ ಕೊಡಬಹುದು, ಆವಶ್ಯಕತೆಗಳನ್ನು ಪೂರೈಸಿಕೊಡಬಹುದು. ತಕ್ಸೀರುಗಳು ಹೆಚ್ಚಾಗುತ್ತ ಇರುವಾಗ, ದೇಶದಲ್ಲಿ ಶಿಸ್ತು ಕಡಿಮೆಯಾಗುವುದನ್ನೂ, ನೀತಿ ಕಡಿಮೆಯಾಗುವುದನ್ನೂ ಮತ್ತು ದರೋಡೆ, ಕೊಲೆ ಇತ್ಯಾದಿ ದುಷ್ಕೃತ್ಯಗಳು ಹೆಚ್ಚಾಗುವುದನ್ನು ನೀವು ತಡೆಗಟ್ಟಿ ಎಂದು ಹೇಳುವಾಗ, ನೀವೂ—ನಾವೂ ಕೂಡಿ ತಡೆಗಟ್ಟೋಣ ಎಂದು ಹೇಳುವುದು ಸೂಕ್ತವೇ ವಿನಾ ಸರ್ಕಾರದವರೇ ತಡೆಗಟ್ಟಲಿ ಎಂದು ಹೇಳಿದರೆ ಕೇವಲ ಸರ್ಕಾರ ತನ್ನ ಆಡಳಿತ ಸಿಬ್ಬಂದಿಯಿಂದ ಮಾತ್ರ ನೀತಿಯನ್ನು ಸಂಪೂರ್ಣವಾಗಿ ಹತೋಟಿಗೆ ತಂದು ದರೋಡೆ, ಕೊಲೆ ಇತ್ಯಾದಿ ದುಷ್ಕೃತ್ಯಗಳನ್ನು ತಡೆಗಟ್ಟತಕ್ಕದ್ದು ಅಸಾಧ್ಯವೆನ್ನುವುದನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪತಕ್ಕ ವಿಷಯ. ಆದುದರಿಂದ ನಾವೂ--ನೀವೂ ಕೂಡಿ ಎಲ್ಲೆಲ್ಲಿ ಯಾವ ಯಾವ ಲೋಪಗಳಿವೆ, ಅವನ್ನು ಬಗೆಹರಿಸಬೇಕಾದರೆ ಏನೇನು ಮಾಡಬೇಕು ಎನ್ನುವುದರ ಬಗ್ಗೆ ರಚನಾತ್ಮಕವಾಗಿ ಯೋಚನೆ ಮಾಡಬೇಕೇ ವಿನಾ ಉಗ್ರವಾಗಿ ಸರ್ಕಾರವನ್ನು ಟೀಕೆ ಮಾಡಿ ಏಕೆ ಕೊಲೆಗಳೂ, ದುಷ್ಕೃತ್ಯಗಳೂ, ಶಾಸನಗಳನ್ನು ಉಲ್ಲಂಘನೆ ಮಾಡತಕ್ಕದ್ದೂ ಹೆಚ್ಚಾಯಿತು ಎಂಬರೆ ಸರ್ಕಾರ ಒಂದೇ ಇವಕ್ಕೆ ಕಾರಣವಲ್ಲ, ಅನೇಕ ಪರಿಸ್ಥಿತಿಗಳು ಇದಕ್ಕೆ ಕಾರಣವಾಗಿವೆ.

Sri G. N. PUTTANNA.—Who is more responsible?

Sri H. M. CHANNABASAPPA.—Society.

Sri J. B. MALLARADHYA.—How long we are going to sit?

Sri B. D. JATTI.—We will sit as usual till Six and if necessary, we have to reply To-morrow.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಕ್ಕೆ ಈ ಬಗ್ಗೆ ತನ್ನ ತನ್ನ ಕರ್ತವ್ಯದಲ್ಲಿ ಸ್ವಲ್ಪ ಮಟ್ಟಿಗೂ ಹಿಂಜರಿಯಬೇಕೆಂಬ ಮನೋಭಾವವಿಲ್ಲ. ತಮ್ಮೆಲ್ಲರಿಗೂ ಎಷ್ಟು ಆಶಯ, ಆಕಾಂಕ್ಷೆಗಳಿವೆಯೋ ಬಡವನ ಮನೆಯ ಬಾಗಿಲಿಗೆ ಶಾಂತಿ-ಸಂರಕ್ಷಣೆಗಳನ್ನು ಒಯ್ಯಲು ಎಲ್ಲ ವಿಧವಾದ ಸುಖ-ಶಾಂತಿಗಳನ್ನು ಅನುಭವಿಸಲು ಏನೇನು ವಾತಾವರಣ ಬೇಕೋ ಅವನ್ನು ರಕ್ಷಣೆ ಮಾಡುವುದರಲ್ಲಿ ಅವನನ್ನು ಕೊಡುವುದರಲ್ಲಿ ತಮಗೆಲ್ಲರಿಗೂ ಎಷ್ಟು ಅಭಿಲಾಷೆಯಿದೆಯೋ ಅಷ್ಟೇ ಆಕಾಂಕ್ಷೆ ಅಭಿಲಾಷೆಗಳು ಸರ್ಕಾರಕ್ಕೂ ಇವೆ ಎಂದು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ತಮಗೆ ಅರಿಕೆ ಮಾಡತಕ್ಕದ್ದು, ಈ ದೇಶದಲ್ಲಿ ಸ್ವಾತಂತ್ರ್ಯ ಸಂಪಾದನೆ ಮಾಡಿ ದೇಶದ ಮೂಲೆಮೂಲೆಗಳಲ್ಲಿ ಬಡವನ ಮನೆಯ ಬಾಗಿಲಲ್ಲಿ ಸುಖ, ಸಮಾಧಾನ ಶಾಶ್ವತವಾಗಿರಬೇಕೆನುವುದನ್ನು ಮನದಲ್ಲಿಟ್ಟುಕೊಂಡು ತ್ಯಾಗ ಮಾಡಿರುವ ನಮಗೆ, ತಮಗೆ ಇರುವಷ್ಟಾದರೂ ಆಶಯ ಆಕಾಂಕ್ಷೆಗಳಿಲ್ಲವೆಂದರೆ ತಪ್ಪಾಗುತ್ತದೆ. ಒಟ್ಟಿನಲ್ಲಿ ಈ ವಿಷಯ ಸರ್ಕಾರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಸಾರ್ವಜನಿಕರು ಮತ್ತು ಸರ್ಕಾರ ಎಲ್ಲರೂ ಸೇರಿ ಮಾಡತಕ್ಕದ್ದು. ಈ ಬಗ್ಗೆ The volume of crime, ನಮ್ಮ ಮೈಸೂರು ಸಂಸ್ಥಾನದಲ್ಲಿನ ಪರಿಸ್ಥಿತಿಯನ್ನು ಇತರ ಸಂಸ್ಥಾನಗಳೊಡನೆ ಹೋಲಿಸಿ ನೋಡಿದರೆ, ಮೈಸೂರು ಸಂಸ್ಥಾನದಲ್ಲಿ ಒಂದು ವರ್ಷಕ್ಕೆ ಒಂದು ಲಕ್ಷ ಪ್ರಜಾಸಂಖ್ಯೆಗೆ ಸರಾಸರಿ 124 ತಕ್ಸೀರುಗಳು ನಡೆಯುತ್ತಿವೆ. ಮಧ್ಯಪ್ರದೇಶದಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆಗೆ 274 ತಕ್ಸೀರುಗಳೂ, ಬೊಂಬಾಯಿನಲ್ಲಿ 206, ಮದ್ರಾಸಿನಲ್ಲಿ 187 ತಕ್ಸೀರುಗಳೂ ನಡೆಯುತ್ತಿವೆ. ನಾವು ಇತರ ಪ್ರಾಂತಗಳೊಡನೆ ಹೋಲಿಸಿ ನೋಡಿದರೆ ಮೈಸೂರು ಸಂಸ್ಥಾನದಲ್ಲಿ ಕಡಿಮೆಯಿದೆ. ನಮ್ಮಲ್ಲಿ ಕಡಿಮೆಯಿದೆ ಎಂದರೆ ಸಾಲದು. ಇಷ್ಟಾದರೂ ಏಕೆ ಇರಬೇಕು ಎಂದು ಕೇಳುವವನು ನಾನು. ಇಷ್ಟೂ ಕೂಡ ಇರಬಾರದು.

Sri G. N. PUTTANNA.—A clarification. Is it under the Indian Penal Code, or all the laws put together?

Sri H. M. CHANNABASAPPA.—All crimes part together.

ತಕ್ಸೀರುಗಳು ಇನ್ನೂ ಕಡಿಮೆಯಾಗಬೇಕು, ಸಾಧ್ಯವಾದಷ್ಟು ಪ್ರಯತ್ನ ಮಾಡಿ ಎಷ್ಟು ಕಡಿಮೆಯಾಗಬಹುದೋ ಅಷ್ಟಕ್ಕೂ ಪ್ರಯತ್ನ ಮಾಡಬೇಕೆಂಬ ಇಚ್ಛೆಯಿದೆ. ತಾವೂ ಮನಸ್ಸು ಮಾಡಬೇಕು. ನನ್ನೊಬ್ಬನಿಂದ ಏನು ಮಾಡುವುದಕ್ಕೆ ಸಾಧ್ಯ?

ಸ್ವಾತಂತ್ರ್ಯ ಬಂದ ನಂತರ ತಕ್ಸೀರುಗಳನ್ನು ಮಾಡತಕ್ಕ ಅವಕಾಶ ಹೆಚ್ಚಿದೆ ಎನ್ನುವುದನ್ನು ತಾವು ಮರೆಯಬಾರದು. ಪ್ರಜಾಸಂಖ್ಯೆ ವಿದ್ಯುದ್ವೇಗದಲ್ಲಿ ಬೆಳೆಯುತ್ತಿರುವ ಕಾಲದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿ ತೀವ್ರವಾಗಿ ಬದಲಾವಣೆಯಾಗುತ್ತಿರುವ ಕಾಲದಲ್ಲಿ ಪ್ರತಿಯೊಬ್ಬನೂ ಕೂಡ ಉತ್ತಮ ದರ್ಜೆಯಲ್ಲಿ ಜೀವನ ಮಾಡಬೇಕು ಎಂದು ಪೈಪೋಟಿ ನಡೆಯುತ್ತಿರುವ ಕಾಲದಲ್ಲಿ, ಆರ್ಥಿಕ ಕ್ರಾಂತಿ. ಸಾಮಾಜಿಕ ಕ್ರಾಂತಿ—, ರಾಜಕೀಯ ಕ್ರಾಂತಿ, ಈ ಕ್ರಾಂತಿಗಳ ಘರ್ಷಣೆಯ ದೆಸೆಯಿಂದಲೂ ತಕ್ಸೀರುಗಳು ಹೆಚ್ಚಾಗತಕ್ಕದ್ದು ಸ್ವಾಭಾವಿಕವಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ಕ್ರಾಂತಿಗಳ ಘರ್ಷಣೆಗಳಿಂದ ಏನು ಉದ್ಭವವಾಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಕ್ಸೀರುಗಳು ಉತ್ಪನ್ನವಾಗುತ್ತದೆ. ಇಂಥ ಒಂದು ಪರಿಸ್ಥಿತಿಯನ್ನು ಹತೋಟಿ ಮಾಡಬೇಕಾದ ಪಕ್ಷದಲ್ಲಿ ಸರ್ಕಾರ ಎಷ್ಟು ಜಬರ್ದಸ್ತಿ ಸಿಬ್ಬಂದಿಯ

ನ್ನಿಟ್ಟು ಕೆಲಸ ಮಾಡಿದರೂ ಕೂಡ, ಸಾರ್ವಜನಿಕರ, ಸಾರ್ವಜನಿಕ ಮುಖಂಡರ, ಸಂಪೂರ್ಣ ಸಹಕಾರವಿದ್ದರೆ ಮಾತ್ರ ದೇಶದಲ್ಲಿ ನೀತಿಯನ್ನು ಬಂದೋಬಸ್ತಾಗಿಡಬಹುದು, ಮತ್ತು ಶಾಂತಿ ಪಾಲನೆ ಮಾಡಬಹುದು. ದುಷ್ಟ ಶಕ್ತಿಗಳಿಗೆ ಒಂದು ಕಡೆ ಅವಕಾಶ ಕೊಟ್ಟು ನಾವೂ ನೀವೂ ಇಲ್ಲಿ ಕುಳಿತು ನಮ್ಮನ್ನು ನೀವು, ನಿಮ್ಮನ್ನು ನಾವು ಟೀಕೆ ಮಾಡಿದರೆ ತಕ್ರಾರುಗಳ ಕಡಿಮೆಯಾಗುವುದಿಲ್ಲ. ಈ ವಿಷಯವನ್ನು ಈ ಸಭೆಯಲ್ಲಿ ಒತ್ತಿ ಒತ್ತಿ ತಿಳಿಸಬೇಕೆಂದು ನನ್ನ ಇಚ್ಛೆ.

ಒಂದು ಕಡೆ ಜಾತೀಯತೆಯಿಂದ ಘರ್ಷಣೆಗಳಾಗಿ ತಕ್ರಾರುಗಳಾಗುತ್ತವೆ, ಮತ್ತೊಂದು ಕಡೆ ಗಡಿ ವಿವಾದದ ಸಂಬಂಧದಲ್ಲಿ ಭಾಷಾ ಪ್ರಾಂತ್ಯಗಳಾಗಬೇಕು ಎಂದು ಹೋರಾಟಗಳನ್ನು ನಡೆಸುತ್ತಿರುವುದರಿಂದಲೂ ತಕ್ರಾರುಗಳಾಗುತ್ತವೆ.

(Interruption by Sri Samaji and L. B. Birje in Marathi)

We have got to go to the fundamentals and find out the root cause and it is not going into superfluous analysis.

ಇದರ ವಿಷಯ ಹೆಚ್ಚು ಪ್ರಸ್ತಾಪ ಮಾಡಬೇಕಾದ್ದು ಅನಾವಶ್ಯಕ.

ಬೆಳಗಾಂನಲ್ಲಿ ಅವರನ್ನು ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು ನಾನು ಕನ್ನಡದಲ್ಲಿ ಮಾತನಾಡಿದ್ದನ್ನು ಅವರೇ ಮರಾಠಿ ಭಾಷೆಯಲ್ಲಿ ಭಾಷಾಂತರ ಮಾಡಿ ಮೈಸೂರು ಸಂಸ್ಥಾನದಲ್ಲಿ ಮೈನಾರಿಟಿ ಕಮ್ಯೂನಿಟೀಸ್‌ಗಳಿಗಿರುವ ರಕ್ಷಣೆ ಮತ್ತು ಸೌಕರ್ಯಗಳು ಬೇರೆ ಯಾವ ಸಂಸ್ಥಾನದಲ್ಲಿಯೂ ಇಲ್ಲ ಎಂದು ಹೇಳಿದ್ದ. ನಾನು ಇವೊತ್ತು ರಕ್ಷಣಾ ಮಂತ್ರಿಯಾಗಿ, ತಮ್ಮ ಮೂಲಕ ಬಾರ್ಡರಿನಲ್ಲಿರುವ ಎಲ್ಲ ಮೈನಾರಿಟಿ ಕಮ್ಯೂನಿಟೀಸ್ ಎನ್ನುವವರಿಗೂ ಇತರರಿಗೂ ಸಮಾನವಾದ ರಕ್ಷಣೆ ಮೈಸೂರು ಸಂಸ್ಥಾನದ ಸರಕಾರದಿಂದ ದೊರಕುತ್ತದೆ ಎಂದು ಪಂಟಾಘೋಷವಾಗಿ ತಿಳಿಸುತ್ತೇನೆ. ನಿಮಗೆ ಸೂಕ್ತ ತೋರುವ ರೀತಿಯಲ್ಲಿ ನಿಮಗೆ ಆಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ.

Sri B. D. JATTI.—Sir, the point is, he wants to impress upon the Hon'ble Minister that they have the right to express in his own language. He says, his rights also should be protected.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಮ್ಮ ಸಂಸ್ಥಾನದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲೇ ಒಂದು ಮನೋಭಾವ ನಮ್ಮಲ್ಲಿ ಬೆಳೆಯುತ್ತಿದೆ.

'Somehow get on' ಹೇಗೋ ಉಳಿದುಕೊಂಡು ನಾವು ಇದ್ದುಬಿಡಬೇಕು ಎನ್ನುವುದು. ಒಂದು ಕಡೆ ವ್ಯಾಪಾರ ಮಾಡತಕ್ಕ ಜನರನ್ನು ನೋಡಿದರೆ ಏನೋ ಕೆಲಸ ನಡೆಯಲಿ, ಸಾಹುಕಾರನಾಗಬೇಕು, ಸೌಕರ್ಯಗಳು ಹೇಗಾದರೂ ಆಗಲಿ Somehow get on ಒಂದು ಕಡೆ ಬೇರೆ ಕ್ಷೇತ್ರಗಳಲ್ಲಿ ನೋಡಿದರೆ: Somehow get on. ನಮ್ಮ ಆಡಳಿತದ ನೌಕರ ವರ್ಗದವರೂ ಹೇಳುವುದು Somehow get on. ವಕೀಲ ವೃತ್ತಿಯಲ್ಲಿರುವವರು ಹೇಳುವುದೂ Somehow get on. ಹೀಗೆ ಯಾವ ಕ್ಷೇತ್ರದಲ್ಲಿ ನೋಡಿದರೂ ಕೂಡ, ಹೇಗಾದರೂ ಆಗಲೀ, ದೇಶದ ಸ್ಥಿತಿ ಹೇಗಾದರೂ ಇರಲಿ ನನಗೆ ಸೌಕರ್ಯವಾಗಬೇಕು. ಅನುಕೂಲವಾಗಬೇಕು ಎನ್ನುವ ಭಾವನೆ ಇದೆ.

ಒಬ್ಬ ಸದಸ್ಯರು.—ಇದರಲ್ಲಿ ಮಂತ್ರಿಗಳೂ ಸೇರಿದ್ದಾರೆಯೇ? (ನಗು)

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಭಾವನೆ ಹೆಚ್ಚುತ್ತಿದೆ. ಈ ಮನೋಭಾವ ಹೆಚ್ಚಾಗುತ್ತಿದೆ. Somehow get on ಎನ್ನುವುದರ ಜೊತೆಗೆ.

Hit and go ಎಂದರೆ, ಸುಮ್ಮನೆ ಹೊಡೆದುಬಿಡುವುದು, ಹೋಗಿಬಿಡುವುದು. ಏನೋ ಒಂದು ಸರಕಾರದ ಮೇಲೆ ಹೇಳಿಬಿಡುವುದು; ತಾವು ಹೇಳಿಬಿಟ್ಟು ವಾಕ್ ಔಟುಮಾಡುತ್ತೇವೆಂದು ಹೇಳಿಬಿಡುವುದು—ಈ ಒಂದು ಮನೋಭಾವ ಎಲ್ಲ ಕ್ಷೇತ್ರಗಳಲ್ಲಿಯೂ ಬೆಳೆಯುತ್ತಿದೆ. ಇದಕ್ಕಾಗಿ ಅವರನ್ನು, ಇವರನ್ನು, ಎಂದು ಆಕ್ಷೇಪಣೆ ಮಾಡತಕ್ಕ ಪ್ರಶ್ನೆಯಿಲ್ಲ.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಮತ್ತು, ಮೂರನೆಯದು, ಸ್ವಲ್ಪಮಟ್ಟಿಗೆ "Loose talk" ಎಂದರೆ ಸ್ವಲ್ಪ ಲಘುವಾಗಿ ನಾವೇ ಮಾತನಾಡುವುದು.

ಹೀಗೆ ಮೂರು-ನಾಲ್ಕು ಭಾವನೆಗಳು ಬೆಳೆಯುತ್ತಿದೆ. ಈ ದೇಶದಲ್ಲಿ ಆಕ್ರಮಣ, ನೀತಿ ನಿಯಮ, ಬಂದೋಬಸ್ತು—ಇವು ಕಡಿಮೆಯಾಗುತ್ತಿದೆ, ಇದು ಮೂಲಕಾರಣಗಳು. ಜೊತೆಯಲ್ಲಿ ಜನಗಳಲ್ಲಿ ಶಿಸ್ತಿನ ಪರಿಪೂರ್ಣತೆ ಬಹಳ ಕಡಿಮೆಯಾಗುತ್ತಿದೆ. ಚಿಕ್ಕ ಮಕ್ಕಳಲ್ಲಿಯೂ ಶಿಸ್ತು ಕಮ್ಮಿಯಾಗಿ ಅಶಿಸ್ತಿಗೇ ಪ್ರೋತ್ಸಾಹ ಕೊಡುತ್ತಿದ್ದಾರೆ. ನಮ್ಮಲ್ಲಿ ಇದರಿಂದ ಶಿಸ್ತು ಕಡಿಮೆ ಯಾಗುತ್ತಿದೆ. ಸಂಯಮ ಕಡಿಮೆಯಾಗುತ್ತಿದೆ. ಇವುಗಳನ್ನು ನಾವು ಗಮನದಲ್ಲಿ ಇಟ್ಟು ಕೊಳ್ಳಬೇಕು. ಅಲ್ಲದೆ Helplessness in Law & Order ನಿಂದ ಈ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಜೊತೆಗೆ Live and let live, ಎನ್ನುವ ಮನೋಭಾವ ಕಡಿಮೆಯಾಗುತ್ತಿದೆ. ಇನ್ನೂ ಇಟ್ಟುಕೊಳ್ಳಬೇಕು, ಬದುಕಬೇಕು, ಇನ್ನೊಬ್ಬರು ಏಕೆ ಬದುಕಬೇಕು ಎಂದು ಹೇಳುತ್ತಾರೆಯೇ ಹೊರತು, ನಾವೂ ಬದುಕಬೇಕು, ಇನ್ನೊಬ್ಬರೂ ಬದುಕಬೇಕು ಎನ್ನುವ ಮನೋಭಾವವುಳ್ಳ ಜನ ಕಮ್ಮಿಯಾಗುತ್ತಿದ್ದಾರೆ. ಒಂದು ಕಡೆ ಪ್ರಜಾ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತಾರೆ. ಇನ್ನು ಕೈಗಾರಿಕೆ ಮತ್ತು ಇನ್ನಿತರ ಉದ್ಯಮಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪನೆಮಾಡಿ ದೇಶದ ಸಂಪತ್ತನ್ನು ಹೆಚ್ಚುಮಾಡುವ ಬದಲು ಜನರಲ್ಲಿ ಸಂಘರ್ಷಣೆ, ಜಾತೀಯ ಕಾರಣಗಳಿಗಾಗಿ ಘರ್ಷಣೆಗಳು, ಆರ್ಥಿಕ ಘರ್ಷಣೆಗಳು, ರಾಜಕೀಯ ಘರ್ಷಣೆಗಳು, ಜೊತೆಗೆ ನನ್ನ ಕೆಲವು ಸ್ನೇಹಿತರು ಹೇಳುವಂತೆ ಭಾಷಾ ಘರ್ಷಣೆಗಳು, ಈ ರೀತಿಯ ಎಲ್ಲ ಘರ್ಷಣೆಗಳೂ ಕೂಡ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ತಮ್ಮಲ್ಲಿ ಈ ಸಂದರ್ಭದಲ್ಲಿ ನಿವೇದನೆ ಮಾಡಿಕೊಳ್ಳು ವುದು ಇಷ್ಟು. ಈ ದೇಶದ ಜನತೆಗೆ ಮತ್ತೊಂದು ಏನು ಹೆಚ್ಚಾಗುತ್ತಿದೆ ಎಂದರೆ Short-cut Methods for Economic development ಎನ್ನುವುದು. ಈ ರೀತಿ ಮಾಡಿ ತೊಂದರೆಗಳನ್ನು ಉದ್ಭವಿಸುವಂತೆ ಮಾಡುವುದು— ಈ ಮಿಥ್ಯವಾದ Short Cut Methods ನ್ನು ನಾವು ಮಾಡ ಬೇಕೆಂದು ಹೋಗುವಾಗ, ನೀತಿಗೆ ನಿಯಮಗಳನ್ನೆಲ್ಲಾ ಬಿಟ್ಟು ಎಲ್ಲ ವಿಚಾರಗಳನ್ನೂ ಮಾಡ ತಕ್ಕದ್ದೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ದೇಶದಲ್ಲಿ ಈಗ ನಮ್ಮ ಮುಂದೆ ಬಂದಿ ರುವ ಪ್ರಶ್ನೆಯನ್ನು ತಾವು ಚೆನ್ನಾಗಿ ಮನ ಗೊಟ್ಟು ಗಮನ ಕೊಡಬೇಕು.

ಈಗ ದೇಶದ ಮುಂದೆ ಬರುತ್ತಿರುವ ತಕ್ಸೀರುಗಳನ್ನು ಮತ್ತು ಅದರ ಜಡ್ಜಮೆಂಟನ್ನು ನೋಡಿದರೆ, ಡಕಾಯಿತಿಗಳು, ಕಳ್ಳತನಗಳು (Thives)—ಕೊಲೆಗಳು (Murders), ಇಂತಹವನ್ನು ಮಾಡುವ ಜನರ ಸಂಖ್ಯೆ ಕಡಿಮೆಯಾಗದೆ ಹೋದರೆ ದೇಶಕ್ಕೆ ಅನಾಹುತವಾಗುತ್ತದೆ. ತಕ್ಸೀರು ಗಳು ಎಷ್ಟಾಗುತ್ತಿವೆ ಎನ್ನುವ ಲೆಕ್ಕಗಳನ್ನು ತೆಗೆದುಕೊಂಡರೆ, ಅವರು ಹೇಳುವಂತೆ ಅವರಿಂದ ದೇಶಕ್ಕೆ ಹೆಚ್ಚಾಗಿ ಅಪಘಾತವಾಗುವುದಿಲ್ಲ.

I am giving you a broad outline.

ಒಂದು ಲಕ್ಷ ತಕ್ಸೀರುಗಳಿದ್ದ ಪಕ್ಷದಲ್ಲಿ ಎಂದು ಒಂದು ಕಡೆ ಲೆಕ್ಕ ಇಟ್ಟುಕೊಳ್ಳೋಣ. ಈ ಹೊತ್ತಿನಲ್ಲ ವಿದ್ಯಾವಂತರಲ್ಲದೆ ಇರುವವರು ಯಾರು ಎನ್ನುವುದನ್ನು ತಾವು ತಿಳಿಯಲಿಕ್ಕೆ ಮಾಹಿತಿ ಇರುವುದರಿಂದ, ತಕ್ಸೀರುಗಳು ಹೆಚ್ಚಾಗಿ ದೇಶದ ಜನಕ್ಕೆ ನೆಮ್ಮದಿ ಮತ್ತು ಸೌಕರ್ಯಗಳನ್ನು ಕೊಡದೆ ಹೋದರೆ, ಜನತೆಯಲ್ಲಿ ನೆಮ್ಮದಿಯನ್ನು ಕಾಪಾಡಲು ನಮಗೆ ಕಷ್ಟವಾಗುತ್ತದೆ.

ನಮ್ಮ ನಿಮ್ಮ ಜೀವನದಲ್ಲಿ ಇದನ್ನು ಯೋಚನೆ ಮಾಡಿ ಸರಿಪಡಿಸಬೇಕೆಂದು ಹೇಳುತ್ತಿದ್ದೇವೆಯೇ ಹೊರತು ಮತ್ತೆ ಯಾರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಾ ಇಲ್ಲ.

ಶ್ರೀ ಎಂ. ರಾಮಪ್ಪ.—ಅವರ ಭಾಷಣ ಬಹಳ ಸ್ವಾರಸ್ಯವಾಗಿದೆ. ಆದರಲ್ಲೇನೋ ಗೋಪ್ಯವಿರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಏನಾಗಿದೆಯೆಂದರೆ ಸಮಾಜದಲ್ಲಿ ನಡೆಯುತ್ತಿರುವ ವಿಶೇಷವಾದ ರೀತಿಯಲ್ಲಿರತಕ್ಕ ಅಪರಾಧಗಳಿಗೆ ಸಭ್ಯರೆನಿಸಿಕೊಂಡಿರುವ ಜನರೇ ಕಾರಣರು ಎಂದು ಹೇಳಬಹುದು. ಹೇಗೆಂದರೆ ಯಾವನು ನ್ಯಾಯವಾದ ರೀತಿಯಲ್ಲಿ ಜೀವನದ ಮಾರ್ಗವನ್ನು ಅವಲಂಬಿಸದೆ ಹೇಗಾದರೂ ಮಾಡಿ ಮುಂದೆ ಬರಬೇಕು ಎಂದು ಹೇಳುತ್ತಾನೋ, ಯಾವನಲ್ಲಿ ತನ್ನ ದೇಹವನ್ನು ದಣಿಸದೆ ತಾನು ಬದುಕಿ ಇನ್ನೊಬ್ಬರಿಗೆ ಬದುಕಲು ಬಿಡುವ ವಿಶಾಲದೃಷ್ಟಿ ಮನೋಭಾವ ಇಲ್ಲದೇ ಇರುತ್ತದೋ, ಯಾವನು ದೇಶದ ಕಾನೂನು ನಿಯಮಗಳಿಗೆ ಅನುಸಾರ ವಾಗಿ ನಡೆಯದೆ ಸ್ವೇಚ್ಛಾಪ್ರವರ್ತನೆಯಿಂದ ನಡೆಯುತ್ತಾನೋ, ಯಾವನು ತನ್ನ ಜವಾಬ್ದಾರಿ ಏನೆಂಬುದನ್ನು ತಿಳಿಯದೆ ತುಚ್ಛವಾದ ಮತ್ತು ಹಗುರವಾದ ಮಾತುಗಳನ್ನಾಡುತ್ತಾನೋ, ಮತ್ತು ಯಾವನು ಬೇಗ ದೊಡ್ಡವನಾಗಬೇಕೆಂಬ ಆಕಾಂಕ್ಷೆಯಿಂದ ತಕ್ಷೀರು ಪ್ರಚೋದನೆ ಮಾಡಲು ಕುಚೋದ್ಯ ಮಾಡುತ್ತಾನೋ ಅಂತಹ ಐದು ಅನಿಷ್ಟ ಪ್ರವೃತ್ತಿಗಳನ್ನು ಮೊಟ್ಟಮೊದಲನೆಯದಾಗಿ ನಿರ್ಮೂಲ ಮಾಡಬೇಕು. ಅಂತಹ ಮನೋಭಾವನೆಯನ್ನು ಜನರಿಂದ ತಪ್ಪಿಸಬೇಕಾದ ಪಕ್ಷದಲ್ಲಿ ಏನು ಮಾಡಬೇಕೆಂದರೆ ನಾವೂ ನೀವೂ ಕೂಡಿ ಕೆಲಸ ಮಾಡಬೇಕು. ಆಲೋಚನೆ ಮಾಡಬೇಕು ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಆದರಿಂದ ತಾವು ಯೋಚನೆಮಾಡಿಕೊಳ್ಳಿ. ನಾನು ಯಾವ ಉದಾಹರಣೆಗಳನ್ನೂ ಇಲ್ಲಿ ಕೊಡಬಾರದು ಎಂದಿದ್ದೆ. ಅದರೆ ಕೊಡುವ ಪ್ರಸಂಗ ಬಂತು, ಕೊಡಬೇಕಾಗಿದೆ. ಈಗ ಆ ರೀತಿ ಪ್ರಚೋದನೆಯನ್ನು ಮಾಡುತ್ತಿರುವುದರಿಂದ ಈ ಉದಾಹರಣೆಯನ್ನು ಕೊಡುತ್ತೇನೆ. ಈಗ್ಗೆ 4 ದಿನಗಳ ಹಿಂದೆ ಇದೇ ಸಭೆಯ ಮಾನ್ಯ ಸದಸ್ಯರೇ ಇಬ್ಬರನ್ನು ಜೊತೆಯಲ್ಲಿ ಕರೆದುಕೊಂಡು ಬಂದರು. ಅವರು ಒಬ್ಬ ಮಾನ್ಯ ದೊಡ್ಡ ಮನುಷ್ಯರು. ಅವರು ನನ್ನಲ್ಲಿಗೆ ಬಂದು ನಮ್ಮ ಅಧಿಕಾರಿ ಒಬ್ಬನ ವಿಷಯದಲ್ಲಿ ಆತ ಬಹಳ ಮಟ್ಟಿಗೆ ಲಂಚಕೋರ. ಲಂಚವನ್ನು ಹೇರಳವಾಗಿ ತೆಗೆದುಕೊಂಡು, ನೂರಾರು ಸಾವಿರಾರು ರೂಪಾಯಿಗಳನ್ನು ಪಡದು ತನ್ನ ಕೆಲಸ ಕಾರ್ಯದಲ್ಲಿ ಡಿಸ್ಕ್ರಿಮಿನೇಷನ್ ಮಾಡಿ ಇಲಾಖೆಗೆ ಬಹಳ ಮಟ್ಟಿಗೆ ಅನಾಹುತ ಮಾಡುತ್ತಿದ್ದಾನೆಂದು ಹೇಳಿದರು, ಮತ್ತು ಆತನ ಮೇಲೆ ಅನೇಕ ಆರೋಪನೆಗಳನ್ನು ಮಾಡಿದರು. ಆಗ ನಾನು ಸ್ವಲ್ಪ ಮಟ್ಟಿಗೆ ಆ ವಿಷಯವನ್ನು ಕೇಳಿದ ಕೂಡಲೇ ಗುರುಗುಟ್ಟಿಕೊಂಡು ನೋಡಿದ ಮಾತ್ರದಿಂದಲೇ ಆರೋಪಣೇಗಳೇ ಕಮ್ಮಿಯಾದವು. ನನ್ನ ಜೊತೆಯಲ್ಲಿ ಆಗ ಈ ಸಭೆಯ ನನ್ನ ಮಾನ್ಯ ಸದಸ್ಯರು ಇದ್ದರು. ಅವರು ಅವರ ಮೇಲೆ ಸುಮಾರು 100–120 ಆರೋಪಣೆಗಳು ಇವೆ ಎಂದು ಹೇಳಿದರು. ನೀವು ಕೇವಲ ನಾಲ್ಕಾರು ಆರೋಪಣೆಗಳನ್ನು ಕೊಟ್ಟರೆ ಸಾಕು. ನಾಳೆಯೇ ನಿಮಗೆ ಇರತಕ್ಕ ತೊಂದರೆಯನ್ನು ತಪ್ಪಿಸುತ್ತೇನೆಂದು ಹೇಳಿದೆ. ಆಗ ಅವರು ಆರೋಪಣೆಗಳ ಪಟ್ಟಿ ಊರನಲ್ಲಿದೆ. ಸುಮಾರು 120 ಕೇಸುಗಳು ಅವರ ಮೇಲಿದೆ ಎಂದು ಹೇಳಿದರು. ಆಗ ನಾನು ತಮಗೆ ಜ್ಞಾಪಕಕ್ಕೆ ಬಂದಿರುವ ಕೇವಲ 4 ಕೇಸುಗಳನ್ನು ಕೊಡಿ, ಸಾಕು ಎಂದು ಹೇಳಿದರೆ, ಅವರು ಅದನ್ನು ಕೊಡಲು ಹಿಂತೆಗೆದರು. ನನಗೆ ಸ್ವಲ್ಪ 10 ನಿಮಿಷಗಳ ಕಾಲ ಕೊಡಿ ಎಂದು ಕೇಳಿದರು. ಆಗಲೇ ಮಾನ್ಯ ಸದಸ್ಯರೂ ಸಹ ಒಳಾಡಳಿತ ಸಚಿವರು ನಿಮ್ಮನ್ನು ಬಿಡಲಿಕ್ಕಿಲ್ಲ ಎಂದು ಹೇಳಿದರು. ನೀವು ಸತ್ಯವನ್ನು ನುಡಿಯದಿದ್ದ ಪಕ್ಷದಲ್ಲಿ ಆ ಅಧಿಕಾರಿಯನ್ನೇ ನಿಮ್ಮ ಮುಂದೆ ಕರೆಸಿಬಿಡುತ್ತೇನೆಂದು ನಾನು ಹೇಳಿದ ಮೇಲೆ ಒಳಗೆ ಹೋಗಿ ಯೋಚನೆ ಮಾಡಿ ನಾಲ್ಕು ಕೇಸುಗಳನ್ನು ಕೊಟ್ಟರು. ಅವರಿಗೆ ಇಂತಿಂಥವರು, ಇಂತಿಂಥ ಕೋರ್ಟಿನಲ್ಲಿ ಇಂತಿಂಥ ಕಾಲದಲ್ಲಿ ಲಂಚ ಕೊಟ್ಟಿದ್ದಾರೆಂಬುದಾಗಿ ಕೇಸುಗಳನ್ನು ಕೊಟ್ಟರು. ಆಗ್ಗೆ ತಕ್ಷಣವೇ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಟ್ರಾನ್ಸ್‌ಪೋರ್ಟ್ ಕಮೀಷನರ್, ಆಂಟಿ ಕರಪ್ಷನ್ ಅಧಿಕಾರಿಗಳು, ಡಿ. ಎಸ್. ಪಿ. ಎಲ್ಲರನ್ನೂ ಕರೆಸಿ ಅವರನ್ನೂ ಸಹ ವ್ಯಾನಿನಲ್ಲಿ ಕೂಡಿಸಿ ಒಂದು ಘಂಟೆಯೊಳಗಾಗಿ ಕಳುಹಿಸಲಾಯಿತು. ಇವರಿಗೆ ಏನೇನು ವಿಷಯಗಳಿದ್ದರೂ ಕೊಡಿ, ನಿಮಗೆ ಎಲ್ಲ ಕಷ್ಟಗಳನ್ನೂ ತಪ್ಪಿಸುತ್ತಾರೆ ಎಂದು ಹೇಳಿದೆ. ಆದರೆ ನನ್ನ ನೋಡಲು ಮತ್ತು ಆ ಆರೋಪಣೆಯನ್ನು ಕೊಡಲು ಬಂದಿದ್ದವರು ನಾನು ಈಗ ಹೋಗುವುದಕ್ಕಾಗುವುದಿಲ್ಲ. ನನ್ನ ಜೊತೆ ನನ್ನ ಹೆಂಡತಿ ಇದ್ದಾರೆ ಎಂದು ಹೇಳಿದರು. ನಿಮ್ಮ ಹೆಂಡತಿಯನ್ನು ಆ ವ್ಯಾನಿನಲ್ಲಿಯೇ ಕರೆದುಕೊಂಡು ಹೋಗಿ ಎಂದು ಹೇಳಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಕ್ಕಳು ಯಾರಾದರೂ ಇದ್ದರೆ !

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರೀತಿಯಾಗಿ ಎಲ್ಲರನ್ನೂ ಕಳುಹಿಸಿಕೊಟ್ಟೆವು. ಅಲ್ಲಿಗೆ ಹೋದ ಕೂಡಲೇ ಅಷ್ಟು ಉತ್ಸಾಹಶಾಲಿಯಾಗಿ ದೂರು ಆರೋಪಣೆ ಮಾಡಿದಂತಹವನ ವಿಚಾರವನ್ನು ಕೇಳಿ ಬಳ್ಳಾರಿಯೊಳಗೆಲ್ಲಾ ಆಶ್ಚರ್ಯವಾಯಿತು! ಒಬ್ಬರು ಅಲ್ಲಿ ಇದ್ದವರು ಇವರು ನನ್ನ ಹತ್ತಿರ ಯಾವಾಗಲೂ ಸಂಬಂಧವಿಲ್ಲವೆಂದು ಹೇಳಿದರು. ಆಗ ಆಂಟಿ ಕರಪ್ಷನ್ ಕಡೆಯವರ ವಿಚಾರಣೆ ಮುಗಿಯಿತು. ಹೀಗೆಯೇ 120 ಕೇಸುಗಳಲ್ಲಿ ಅಧಿಕಾರಿಗಳು ಡಿಸ್ಕ್ರಿಮಿನೇಷನ್ ಮಾಡಿದ್ದಾರೆಂದು ಹೇಳಿದ ಮೇಲೆ ಎಲ್ಲ ಇಲಾಖೆಯ ಮುಖ್ಯಾಧಿಕಾರಿಗಳಲ್ಲೂ ಸುಮಾರು 1-1½ ವರ್ಷ ಕಾಲ ತನಿಖೆ ವಿಚಾರಣೆಗಳನ್ನೂ ಪರೀಕ್ಷೆಗಳನ್ನೂ ಮಾಡಿಸಲಾಯಿತು. ಎಲ್ಲಿಯೂ ಯಾವ ಅಧಿಕಾರಿಯೂ ಲೋಪ ದೋಷಗಳನ್ನು ಮಾಡಿದ್ದಾರೆಂಬುದು ಕಂಡುಬರಲಿಲ್ಲ. ಇವರು ದೂರು ಹೇಳಿದ ಒಂದು ಅಂಶವೂ ನಿಜವಲ್ಲ. ಆಗ ಅನೇಕರು ಇವರ ವಿಷಯದಲ್ಲಿ ಪೂರ್ವೋತ್ತರ ವಿಚಾರ ಮಾಡಿದ ಮೇಲೆ ಇವರ ಕಸುಬೇ ಇದಾಗಿದೆ ಎಂದು ಹೇಳಿದರು, ಮತ್ತು ಅದೂ ಅಲ್ಲದೆ ಇವರು ಆಗಿಂದಾಗ್ಗೆ ಷಾರ್ಟ್‌ಕಟ್ ಮೆಥಡ್ಸ್ ರೀತಿಯಲ್ಲಿ ಮಂತ್ರಿಗಳ ಹತ್ತಿರವಾಗಲಿ ಅಥವಾ ಅಧಿಕಾರಿಗಳ ಹತ್ತಿರವಾಗಲಿ ಹೋಗಿ ಸುಮ್ಮನೆ ಹೆದರಿಸುವುದು ಸಿಕ್ಕಾಪಟ್ಟೆ ಅರ್ಜಿಗಳನ್ನು ಕೊಡುವುದು, ತನ್ನ ಕೆಲಸವೇನಾದರೂ ಆಗದಿದ್ದರೆ ನಾಳೆ ತನಿಖೆ ಮಾಡಿಸುತ್ತೇನೆಂದು ಹೇಳುವುದು—ಅದೇ ಇವರ ಕಸುಬು ಎಂದು ರಿಪೋರ್ಟ್ ನನಗೆ ಬಂದಿದೆ. ಇವರ ಪೂರ್ವೋತ್ತರ ವಿಷಯ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದಕ್ಕೋಸ್ಕರ ಇವರು ಒಂದು ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ನಿನ ಆನರರಿ ಸೆಕ್ರೆಟರಿ ಎಂದು ತಿಳಿದು ಬಂತು. ಆಮೇಲೆ ಅಸೋಸಿಯೇಷನ್ನಿನ ಪ್ರೆಸಿಡೆಂಟರನ್ನು ಫೋನಿನಲ್ಲಿ ಕಾಂಟ್ಯಾಕ್ಟ್ ಮಾಡಿ ಅವರ ಪೂರ್ಣ ಚರಿತ್ರೆಯನ್ನು ತಿಳಿದುಕೊಂಡೆ. ಮತ್ತೆ ಸಿ. ಐ. ಡಿ. ಕಡೆಯಿಂದಲೂ ತಿಳಿದುಕೊಂಡೆ. ಕೊನೆಯಲ್ಲಿ ಅವರು ಯಾವುದೋ ಒಂದು ಕಾಲದಲ್ಲಿ ಆ ಅಸೋಸಿಯೇಷನ್ನಿಗೆ ಸೆಕ್ರೆಟರಿಯಾಗಿದ್ದರಂತೆ. ಅವರು ಇಂತಹ ದುಷ್ಕೃತ್ಯಗಳನ್ನು ಮಾಡುತ್ತಿದ್ದರೆಂದೇ ಅವರನ್ನು ಸೆಕ್ರೆಟರಿ ಹುದ್ದೆಯಿಂದ ತೆಗೆದುಹಾಕಿದ್ದಾರೆಂದು ತಿಳಿದು ಬಂತು. ಇನ್ನೂ ಅನೇಕ ಪೂರ್ವೋತ್ತರ ಚರಿತ್ರೆ ಇವರ ಸಂಬಂಧವಾಗಿ ತಿಳಿದು ಬಂದಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಅವರನ್ನು ಪ್ರಾಸಿಕ್ಯೂಟ್ ಮಾಡುತ್ತಿರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ. ಇಂತಹವರ ದೆಸೆಯಿಂದ ದೇಶದಲ್ಲಿ ಕಷ್ಟವಾಗಿದೆ. ಅದಕ್ಕೆ ತಕ್ಕ ಶಿಕ್ಷೆಯಾಗಬೇಕು.

SRI G. N. PUTTANNA.—Very good we will congratulate,

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಜವಾಗಿಯೂ ಬಡವರು ತಂತಮ್ಮ ಕಸುಬನ್ನು ನಿರ್ವಹಿಸುವುದಕ್ಕೆ ಈಗಿನ ಕಾಲದಲ್ಲಿ ಬಹಳ ಕಷ್ಟವಾಗಿದೆ. ಈಚೆಗೆ ಕಳ್ಳತನಗಳೇನೋ

ಕಡಿಮೆಯಾಗಿವೆ. ಕಳ್ಳತನದ ಮನೋಭಾವನೆ ಇಲ್ಲದೆ ಇರುವವರು, ಸತ್ಯಸಂಧತೆಯಿಂದ ಇರುವವರು, ತಪ್ಪುಮಾರ್ಗವನ್ನು ಹಿಡಿಯದೆ ಇರುವವರು ಪಾರ್ಟ್‌ಕಟ್ ಪಾಲಸಿ ಮೇಲೆ ಅಂತಹವರನ್ನು ದೇಶದಲ್ಲಿ ನಿರ್ಮೂಲ ಮಾಡುವುದಕ್ಕೆ ಅಂತಹವರು ದೇಶದಿಂದ ಪಾರಾಗುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಅಂತಹವರನ್ನು ಮೊದಲು ಪ್ರಾಸಿಕ್ಯೂಟ್ ಮಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮತ್ತೆ ಯಾರೇ ಆಗಲಿ ಹೆನಿಯಸ್ ಕ್ರೈಮ್ಸ್ ಮಾಡಿ ಅನ್ಯಾಯವಾಗಿ ತಪ್ಪಾಗಿ ನಡೆದಿರುವ ಕಾಲದಲ್ಲಿ ಅಂತಹವರನ್ನು ಹಿಡಿದು ಶಿಕ್ಷೆ ಮಾಡುವುದರಲ್ಲಿ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗ ಮಾಡಬೇಕೆಂದು ತಮ್ಮ ಮೂಲಕ ನಾನು ಎಲ್ಲ ಮಾನ್ಯ ಸದಸ್ಯರನ್ನೂ ಕೇಳಿಕೊಳ್ಳುತ್ತೇನೆ. ಎಲ್ಲಾದರೂ ಒಂದು ಮರ್ಡರ್ ಆಗಿದೆಯೆಂದರೆ ಅದಕ್ಕೆ ಜಾತೀಯತೆಯನ್ನು ತಂದು ರಾಜಕೀಯ ಬಣ್ಣವನ್ನು ಕಟ್ಟಿ ಇನ್‌ವೆಸ್ಟಿಗೇಷನ್ ಮಾಡುವ ಅಧಿಕಾರಿಗಳಿಗೆ ಬುದ್ಧಿಭ್ರಮಣೆಯುಂಟಾಗುವಂತೆ ಯಾರೂ ಮಾಡಬಾರದೆಂದು ನಾನು ತಿಳಿಸುತ್ತೇನೆ. They will be handicapped in taking a correct decision. ಈಗ ಕಾಲಾತೀತವಾದ್ದರಿಂದ ಅದಕ್ಕೊಂದು ಉದಾಹರಣೆಯನ್ನು ಹೇಳಲಿಕ್ಕೆ ಹೋಗುವುದಿಲ್ಲ. ಒಂದೊಂದು ಕಡೆಯಲ್ಲೂ ಯಾವ ರೀತಿ ಮರ್ಡರ್ಸ್, ಕಳ್ಳತನ, ಇತ್ಯಾದಿ, ಕೇಸುಗಳು ನಡೆಯುತ್ತಿವೆ ಎಂಬುದನ್ನು ನಾವು ಪ್ರತಿ ದಿವಸವೂ ಪತ್ರಿಕೆಗಳಲ್ಲಿ ನೋಡುತ್ತಿದ್ದರೆ, ಪ್ರತಿಯೊಬ್ಬರ ಮನಸ್ಸನ್ನೂ ಸಹ ಕಳಂಕವನ್ನುಂಟು ಮಾಡುವ ಹಾಗೆ ಆಗುತ್ತದೆ. ಯಾರಾದರೂ ತಪ್ಪಿತಸ್ಥರು ಇದ್ದರೆ ಅವರನ್ನು ವಿಚಾರ ಮಾಡುವಾಗ ಅಧಿಕಾರಿಗಳಿಗೆ ಬುದ್ಧಿ ಭ್ರಮಣೆಗೊಳಿಸುವಂತಹ ಕ್ರೈಮ್ಸ್ ಈಗ ದೇಶದಲ್ಲಿ ನಡೆಯುತ್ತಿದೆ.

Sri G. N. PUTTANNA.—That is the criminal mentality of the criminals.

ಶ್ರೀ ಎಚ್ ಎಂ. ಚನ್ನಬಸಪ್ಪ.—ಆದ್ದರಿಂದ ನಾನು ದೇಶದ ಎಲ್ಲ ಮುಖಂಡರಿಗೂ ಈ ಮಾನ್ಯಸಭಾ ಸದಸ್ಯರಿಗೂ, ಮತ್ತು ಇತರರೆಲ್ಲರಿಗೂ ಅರಿಕೆ ಮಾಡಿಕೊಳ್ಳುವುದಿಷ್ಟೆ. ಏನೆಂದರೆ ತಮ್ಮಲ್ಲಿ ಯಾವ ಇನ್‌ಫರ್‌ಮೇಷನ್ ಇದ್ದರೂ ನನಗೆ ಕೊಡಿ, ತಪ್ಪಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಿ, ಅದನ್ನು ಬಿಟ್ಟು ಸುಮ್ಮ ಸುಮ್ಮನೆ ಪತ್ರಿಕೆಗಳಲ್ಲಿ ಪ್ರಕಟ ಮಾಡುವುದು, ಇನ್‌ವೆಸ್ಟಿಗೇಷನ್ ಮಾಡತಕ್ಕ ಅಧಿಕಾರಿಗಳಿಗೆ ಬುದ್ಧಿಭ್ರಮಣೆಯನ್ನುಂಟುಮಾಡುವುದು, ಜನತೆಯಲ್ಲಿ ಒಂದು ರೀತಿಯ ಭಯವನ್ನೂ ಮತ್ತು ಬಲಹೀನತೆಯನ್ನೂ ಉಂಟುಮಾಡುವುದು, ಇದರಿಂದ ಜನರ ವಾತಾವರಣ, ಮನೋಭಾವ ಅವುಗಳ ಮೇಲೆ ಪ್ಲೇ ಮಾಡುವುದು ಇಂತಹ ಕಾರ್ಯಕ್ರಮಗಳನ್ನು ದೇಶದಲ್ಲಿ ಯಾರೂ ತೆಗೆದುಕೊಳ್ಳಕೂಡದೆಂದು ನಾನು ಎಲ್ಲರನ್ನೂ ಮತ್ತೊಮ್ಮೆ ಅರಿಕೆ ಮಾಡುತ್ತೇನೆ. ಅದರಲ್ಲೂ ಈಗ ಬಿದರೆ ಹುತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಎಲ್ಲೆಲ್ಲೂ ಭಾಷಾವಾರು ಒಂದು ಕೂಗು ಇದೆ. ನಮಗೆ ನ್ಯಾಯವಾಗಿ ಈ ದೇಶ ಬೇಕಾಗಿಲ್ಲ, ನಾವು ಇನ್ನೊಂದು ದೇಶಕ್ಕೆ ಹೋಗುತ್ತೇವೆಂದು ಅವರು ಹೇಳಿದರೆ ಯಾರು ಬೇಡ ಎಂದು ಹೇಳುತ್ತಾರೆ! ಶಾಸನದಲ್ಲಿ ಯಾವ ರೀತಿ ಈ ಬಗ್ಗೆ ಕ್ರಮವನ್ನು ಅನುಸರಿಸಬೇಕೋ ಆ ರೀತಿ ರಾಜ್ಯಾಂಗದ ವಿಧಿಯಂತೆ ಅನುಸರಿಸಿ ಕ್ರಮವನ್ನು ತೆಗೆದುಕೊಂಡರೆ ಅದಕ್ಕೆ ಸಂಪೂರ್ಣ ಮಾನ್ಯತೆಯನ್ನು ಈ ಸರ್ಕಾರ ಕೊಡುತ್ತದೆ. ಆದರೆ ಶಾಸನದ ಮಾರ್ಗಗಳನ್ನು ಬಿಟ್ಟು ಅನ್ಯಾಯವಾಗಿ ನಡೆಯುವ ತಪ್ಪಿತಸ್ಥನು ಯಾರೇ ಆಗಲಿ, ಅವನನ್ನು ಶಿಕ್ಷೆಗೆ ಖಂಡಿತವಾಗಿ ಗುರಿಪಡಿಸಲಾಗುತ್ತೆ. ದೇಶದಲ್ಲಿ

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ಜನರನ್ನು ಅವಮಾನಗೊಳಿಸತಕ್ಕ ಕೃತ್ಯವನ್ನು ಯಾರೇ ಮಾಡಲಿ, ಅಂತಹವರನ್ನು ಶಿಕ್ಷೆ ಮಾಡಲೇಬೇಕಾಗಿದೆ. ಆದ್ದರಿಂದ ದೇಶದಲ್ಲಿ ನ್ಯಾಯ ರೀತಿಯಿಂದ ನಡೆಯುವ ಎಲ್ಲ ವರ್ಗದ ಜನಗಳಿಗೂ, ಎಲ್ಲ ವರ್ಗದ ಮೈನರ್ ಕಮ್ಯೂನಿಟಿಗಳಿಗೂ, ಪ್ರತಿಯೊಬ್ಬರಿಗೂ ಸಮಾನವಾದ ರಕ್ಷಣೆಯನ್ನು ಈ ಸರ್ಕಾರ ಕೊಡುತ್ತದೆ ಎನ್ನುವುದನ್ನು ಘಂಟಾಘೋಷವಾಗಿ ತಿಳಿಸಲಿಚ್ಛಿಸುತ್ತೇನೆ. ಅದೇ ಮಾತಿನಲ್ಲಿ ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಶಾಸನಗಳನ್ನು ಉಲ್ಲಂಘನೆ ಮಾಡುವ ಜನ ಯಾರೇ ಆಗಲೀ ಯಾವ ಕ್ಷೇತ್ರದಲ್ಲಿಯೇ ಇರಲಿ, ಅವರಿಗೆ ಶಾಸನವನ್ನು ಉಲ್ಲಂಘನೆ ಮಾಡುವ ಮನಸ್ಸು ಒಳಗಿದ್ದರೂ ಅದನ್ನು ಸಹ ಹಿಡಿಯುತ್ತಿದ್ದೇವೆ. ಯಾರೇ ಆಗಲಿ ಎನ್ನುವ ಮಾತಿನಲ್ಲಿ ನಾನೂ ಸಹ ಸೇರಿದ್ದೇನೆ. ಆ ರೀತಿ ನಾನೇ ಸೇರಿರುವಾಗ ಇನ್ನೊಬ್ಬರನ್ನು ಬಿಡುವ ಹಾಗಿಲ್ಲ. ಏಕೆಂದರೆ ಶಾಸನಗಳನ್ನು ಮಾಡತಕ್ಕವರು ನಾವು.

6–00 P.M.

ಯಾರಾದರೂ ಆಗಲೀ ಅನ್ನುವ ಮಾತಿನಲ್ಲಿ ನಾನೂ ಸೇರಿದ್ದೇನೆ. ನೀವು ಸೇರಿದ್ದೀರಿ. ಇದರಲ್ಲಿ ಬೇರೆ ಭಿನ್ನಾಭಿಪ್ರಾಯವೇ ಇಲ್ಲ. ಈ ದಿವಸ ಈ ಶಾಸನಸಭೆಯಲ್ಲಿ ಕುಳಿತು ಶಾಸನಗಳನ್ನು ಮಾಡತಕ್ಕವರು ನಾವು. ಹಾಗೆ ನಾವು ಮಾಡಿದಂಥ ಶಾಸನಗಳನ್ನು ನಾವೇ ಮುರಿದಪಕ್ಷದಲ್ಲಿ ಅಂದರೆ ನಾವಾಗಲೀ–ನೀವಾಗಲೀ ಈ ಶಾಸನಗಳನ್ನು ಉಲ್ಲಂಘನೆಮಾಡಿ ನಡೆದ ಪಕ್ಷದಲ್ಲಿ–ಅವುಗಳನ್ನು ಮುರಿದ ಪಕ್ಷದಲ್ಲಿ ಅಂಥವರು ಈ ಶಾಸನ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯರಲ್ಲವೆಂದು ಹೇಳುತ್ತೇನೆ. ಆದರೆ ನಾವಿನ್ನು ಹೇಳುವುದು ಹೆಚ್ಚಾಗಿಲ್ಲ. ಮಾಡುವುದು ಜಾಸ್ತಿ ಇರುತ್ತೆ. ಈಗ ಸರ್ಕಾರದವರು ಮುಂದೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿರುತ್ತಾರೆಂಬುದನ್ನು ತಿಳಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ. ನಾನು ಈ ಮೊದಲೇ ಹೇಳಿದಂತೆ ಈ ಮೋಟಾರ್ ಸಾರಿಗೆ ವಿಚಾರದಲ್ಲಿ ಆ ಮೋಟಾರ್‌ಸಾರಿಗೆ ಆಕ್ಟಿನಲ್ಲಿ ಏನು ರೂಲ್ಸು—ರೇಗ್ಯುಲೇಷನ್‌ಗಳಿರುತ್ತವೆಯೋ ಅವು ಜಾರಿಯಲ್ಲಿವೆಯೋ-ಇಲ್ಲವೋ ಎನ್ನುವಷ್ಟರ ಮಟ್ಟಿಗೆ ಅನುಮಾನ ಬರುವಂತೆ ಈ ದಿವಸ ಈ ಲಾರಿ–ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಹೀಗಾಗಿ ಈ ದಿವಸ ತಿರುಗಾಡತಕ್ಕ ಸಾರ್ವಜನಿಕರ ಜೀವನಕ್ಕೊಂದು ರಕ್ಷಣೆಯಿಲ್ಲದಂತಾಗಿದೆ, ಇದನ್ನು ತಡೆಗಟ್ಟಲು ಸರ್ಕಾರದವರು ಇನ್ನು ಮುಂದೆ ಈ ವಿಚಾರದಲ್ಲಿ ಉಗ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಕ್ತ ಏರ್ಪಾಡುಗಳನ್ನಾಗಲೇ ಮಾಡಿದ್ದೇವೆ. ದೇಶದಲ್ಲಿ ಅವರು ಯಾರೇ ಆಗಿರಲಿ, ಅವರು ಎಲ್ಲೋ ಇರಲಿ, ಅವರು ಈ ಅಕ್ರಮ ನಡವಳಿಕೆ ನಡಸುತ್ತಿದ್ದಾರೆಂದು ಸರ್ಕಾರಕ್ಕೆ ತಿಳಿಸಿದರೆ ಅಂಥಾ ಪರ್ಮಿಟ್ ಹೋಲ್ಡರ ಬಗ್ಗೆ ಉಗ್ರ ಕಾರ್ಯಕ್ರಮಗಳನ್ನು ಶಾಸನಬದ್ಧವಾದ ರೀತಿಯಲ್ಲಿ ಕೈಗೊಳ್ಳಲು ಹಿಂಜರಿಯುವುದಿಲ್ಲ. ಹಾಗೆ ನಮಗೆ ನ್ಯಾಯವನ್ನು ಎತ್ತಿ ಹಿಡಿಯಲು ಯಾರು ಮುಂದೆ ಬರುತ್ತಾರೋ ಅಂಥವರಿಗೆ ಸರ್ಕಾರದವರು ಸಂಪೂರ್ಣ ರಕ್ಷಣೆಕೊಡಲು ಸಿದ್ಧರಾಗಿದ್ದೇವೆ. ನಾನೀಗ ಸರ್ಕಾರದವರ ಪರವಾಗಿಯೂ ಮತ್ತು ಸಾರ್ವಜನಿಕರ ಪರವಾಗಿಯೂ ತಮ್ಮೆಲ್ಲರಿಗೂ ತಿಳಿಸಬೇಕಾಗಿರುವುದೇನೆಂದರೆ ಯಾರು ಈ ಶಾಸನಗಳನ್ನು ಉಲ್ಲಂಘನೆಮಾಡಿ some-how get on ಅನ್ನೋ ಪಾಲಸಿಯನ್ನು ಅನುಸರಿಸುತ್ತಾರೋ ಅಂಥವರನ್ನು ಸರ್ಕಾರ ಬಿಲಕ್ಕೆ ಹೊಕ್ಕರೂ ಬಿಡಲಿಕ್ಕಿಲ್ಲ ಎಂಬುದನ್ನು ನಿರ್ಧರಿಸಲಾಗಿದೆ. ಆದುದರಿಂದ ಇನ್ನು ಮುಂದೆ ದೇಶದಲ್ಲಿರತಕ್ಕ ಲಾರಿ–ಓನರುಗಳಾಗಲೀ-ಬಸ್-ಓನರುಗಳಾಗಲೀ ಅಥವಾ ಅವರ ಡ್ರೈವರ್‌ಗಳಾಗಲೀ-ಕಂಡಕ್ಟರುಗಳಾಗಲೀ ತಮ್ಮ ತಮ್ಮ ವೆಹಿಕಲ್ಸ್‌ಗಳನ್ನು ಕಾಲ ಕಾಲಕ್ಕೆ ಸರಿಯಾಗಿ ಓಡಿಸದೆ, ಎಷ್ಟು ಸ್ಪೀಡ್ ಇರಬೇಕೋ ಅಷ್ಟು ಸ್ಪೀಡಿಲ್ಲದೆ ಅದಕ್ಕೆ ಹೆಚ್ಚಿನ ಸ್ಪೀಡಿನಲ್ಲಿ ಗಾಡಿಗಳನ್ನು ಓಡಿಸುತ್ತಿದ್ದಾರೆ. ಅಥವಾ ಯಾರೇ ಆಗಲೀ ಈ 'ಲಡಾಸ್' ಗಾಡಿಗಳನ್ನು ಓಡಿಸಲಿಕ್ಕೆ ಪರ್ಮಿಟ್‌ಗಳನ್ನು ಕೊಟ್ಟ ಭಾಗದಲ್ಲಿ–ಇವರೆಲ್ಲರೂ ಉಗ್ರ ಶಿಕ್ಷೆಗೆ ಗುರಿಯಾಗುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೋಡ್-ಟ್ರಾನ್ಸ್‌ಪೋರ್ಟ್ ಬಸ್ಸುಗಳಾದರೋ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾವ ಬಸ್ಸೇ ಆಗಲಿ, ಓವರ್-ಲೋಡಿಂಗ್, ಓವರ್-ಸ್ಪೀಡಿಂಗ್ ಇದ್ದ ಪಕ್ಷದಲ್ಲಿ ಅದನ್ನು ಪತ್ತೆಹಚ್ಚಲು ಈಗಾಗಲೇ 4-5 ಸ್ಪೆಷಲ್-ಸ್ಕ್ವ್ಯಾಡ್‌ಗಳನ್ನು ಮಾಡಿದ್ದೇವೆ. ಇವರಾಗಲೇ ಕಾರ್ಯಕ್ರಮ ಕೈಗೊಂಡು ದೇಶದ ಮೂಲೆ ಮೂಲೆಯಲ್ಲೆಲ್ಲಾ ದುರ್ಬೀನ್ ಹಾಕಿನೋಡಿ ತಪ್ಪಿತಸ್ಥರನ್ನಾಗಲೇ ಹಿಡಿದುಕೊಂಡು ಬರುತ್ತಿದ್ದಾರೆ. ಈಗಾಗಲೇ ಎರಡು ಸರ್ಕಲ್‌ಗಳಿಂದ ಸುಮಾರು 154 ಜನರನ್ನು ಹಿಡಿದುಕೊಂಡು ಬಂದಿದ್ದಾರೆ. ಈ ಸ್ಪೆಷಲ್ ಸ್ಕ್ವ್ಯಾಡ್‌ಗಳ ಜೊತೆಗೆ ಟ್ರಾನ್ಸ್‌ಪೋರ್ಟ್ ಕಮೀಷನರ ಒಂದು ಸ್ಕ್ವ್ಯಾಡ್ ಬೇರೆ ಇದೆ. ಈ ಸ್ಕ್ವ್ಯಾಡ್‌ಗಳಲ್ಲೆಲ್ಲ ಒಬ್ಬೊಬ್ಬ ಇನ್‌ಸ್ಪೆಕ್ಟರು, ಒಬ್ಬ ಸಬ್-ಇನ್‌ಸ್ಪೆಕ್ಟರ್, ನಾಲ್ಕು ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳೂ ಬಂದೂಕು, ಮದ್ದು-ಗುಂಡು ಯಾವಕಾಲಕ್ಕೆ ಏನೇನು ಆಯುಧಗಳು ಬೇಕೋ ಅಂಥಾ ಇತ್ಯಾದಿ ಆಯುಧ ಸಜ್ಜಿತರಾದ ಶಿಪಾಯಿಗಳು ಇಷ್ಟೆಲ್ಲ ಇರುತ್ತಾರೆ. ಈ ಶಾಸನ ಉಲ್ಲಂಘನೆ ಮಾಡತಕ್ಕ ಜನರಿಗೆ ಈಗ ತಮ್ಮೆಲ್ಲರ ಮೂಲಕ ಈ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಆದರೆ ಈ ಪ್ರೊಹಿಬಿಷನ್ನು ಇಲಾಖೆಯನ್ನು ಪೋಲೀಸ್ ಇಲಾಖೆಯ ಕೈವಾಡದಿಂದ ತಪ್ಪಿಸ ಬೇಕೆಂಬುದಾಗಿ ಕೆಲವರು ಹೇಳಿದ್ದಾರೆ. ಹಾಗೆ ಈ ಬದಲಾವಣೆಯಿಂದ ದೇಶಕ್ಕೊಂದು ಒಳ್ಳೆಯ ದಾಗುವುದಾಗಿದ್ದರೆ ಮಾಡಲಿ; ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಆದರೆ ಈ ದಿವನ ಈ ಬಾಬನ್ನು ಪೋಲೀಸ್ ಇಲಾಖೆಯಿಂದ ಹೊರಕ್ಕೆ ತೆಗೆದುಕೊಂಡರೆ ಇದರ ಉಸ್ತುವಾರಿಗೆ ಬೇರೆ ಜನರನ್ನು ತರುವುದು ಎಲ್ಲಿಂದ? ಒಂದು ಪ್ರದೇಶದಲ್ಲಿರತಕ್ಕ ಪೋಲೀಸನನ್ನು ಬೇರೊಂದು ಕಡೆಗೆ ವರ್ಗಾಯಿಸಿದರೆ ಇದು ಜಯಪ್ರದವಾಗುತ್ತದೆಂದು ನಾನು ನಂಬಲಾರೆ. ಆದರೆ ಈ ಬಾಬಿನಲ್ಲಿ ನಾವೂ-ನೀವೂ ನಿರೀಕ್ಷಿಸಿದ ಮಟ್ಟದಲ್ಲಿ ಜಯಪ್ರದ ಲಭಿಸದೆ ಇದ್ದರೆ ಇದಕ್ಕೆ ಮೂಲಭೂತವಾದ ಕಾರಣಗಳೇನೆಂಬು ದನ್ನು ಕಂಡುಹಿಡಿಯಬೇಕು. ಹಾಗೆ ಕಾರಣಗಳನ್ನು ಶೋಧಿಸಿ ಪತ್ತೆಹಚ್ಚಿ ಆಗುವಂತ ಕಾರಣ ಗಳನ್ನು ನಮ್ಮ ಶಕ್ತಿ, ನಿಮ್ಮ ಶಕ್ತಿ, ಸಾರ್ವಜನಿಕರ ಶಕ್ತಿ, ಸರ್ಕಾರದ ಶಕ್ತಿ, ಇಷ್ಟೆಲ್ಲವನ್ನೂ ಒಟ್ಟು ಗೂಡಿಸಿ ಈ ಪ್ರೊಹಿಬಿಷನ್ನನ್ನು ಜಯಪ್ರದಗೊಳಿಸಲಿಕ್ಕೆ ಸಾಧ್ಯವಾಗಲಿಲ್ಲವೆಂತ ಹೇಳುವುದಾದರೆ ಆಗ ನಾವು ಇಲ್ಲಿ ಮಂತ್ರಿಗಳಾಗಿ ಕುಳಿತುಕೊಳ್ಳುವುದಕ್ಕೆ ಲಾಯಖ್ಖಾಗಿಲ್ಲ ಮತ್ತು ಅಲ್ಲಿ ನೀವು ಸದಸ್ಯರಾಗಿ ಕುಳಿತುಕೊಳ್ಳುವುದಕ್ಕೂ ಲಾಯಖ್ಖಾಗಿಲ್ಲ.

Sri C.J. MUCKANNAPPA.—Please excuse me, in your over-enthusiasm, it is rather an insult to the Members.

Sri C. M. ARUMUGHAM.—Sir, I rise to a point of order. Can the Hon'ble Minister say like that?

Sri H. M. CHANNABASAPPA.—My intention is Sir, I and you must join together and make it a success. I only desire that the best in you must come out. All of us must put our heads and hearts together. ಆದುದರಿಂದ ನಾನೀಗ ತಮ್ಮೆಲ್ಲರಲ್ಲೂ ಅರಿಕೆ ಮಾಡಿಕೊಳ್ಳುವುದೇನೆಂದರೆ ಇನ್ನು ಕೆಲವು ದಿನಗಳಲ್ಲೇ ಪ್ರತಿಯೊಂದು ಜಿಲ್ಲೆಯ ಮಾನ್ಯ ಸದಸ್ಯರನ್ನೂ ಕರೆಸಿಕೊಂಡು ಅವರೊಡನೆ ಸೂಕ್ತ ಸಮಾಲೋಚನೆ ಗಳನ್ನು ನಡೆಸಿ ಅನಂತರ ಆಯಾಯ ಜಿಲ್ಲೆಯಲ್ಲಿರತಕ್ಕ ಸಂಬಂಧಪಟ್ಟ ಅಧಿಕಾರಿಗಳಲ್ಲೂ ಸಮಾಲೋಚನೆ ನಡೆಸಿ ಅನಂತರ ಈ ಬಗ್ಗೆ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಆಶಿಸುತ್ತೇನೆ. ಈ ಕಳ್ಳಭಟ್ಟಿ ತಯಾರು ಮಾಡತಕ್ಕ ಜನರನ್ನು ಏಕಕಾಲಕ್ಕೇ ನಾಲ್ಕು ಹಂತಗಳಲ್ಲಿ ಮುತ್ತಿಗೆ ಹಾಕಿ ಅವರನ್ನು ತಯಾರಿಸತಕ್ಕ ಸ್ಥಳದಲ್ಲೂ, ರವಾನೆ ಮಾಡತಕ್ಕ ಮಾರ್ಗ, ಮಾರಾಟ ಮಾಡತಕ್ಕಸ್ಥಳ ಮತ್ತು ಕುಡಿಯುವ ಜಾಗ ಈ ನಾಲ್ಕು ಕಡೆಗಳಲ್ಲೂ ಮುತ್ತಿಗೆಹಾಕಿ ಹಿಡಿಯುವಂಥ ಶಿಕ್ಷಣವನ್ನೂ ತರಬೇತನ್ನೂ ಕೊಡಲಾಗುತ್ತದೆ. ಆದಕಾರಣ ಈ ವಿಚಾರದಲ್ಲಿ ಈ ಕಡೆಯಿರತಕ್ಕ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಮಾನ್ಯ ಸದಸ್ಯರೂ, ಆಕಡೆಯಿರತಕ್ಕ ಮಾನ್ಯ ಸದಸ್ಯರೂ ಈ ವಿಚಾರದಲ್ಲಿ ತಮ್ಮೆಲ್ಲರ ಸಂಪೂರ್ಣ ಸಹಕಾರ-ಶಕ್ತಿಗಳನ್ನು, ಸಹಾನುಭೂತಿಯನ್ನೂ ಹಾಗೂ ಯುಕ್ತಿಯನ್ನು ಸರ್ಕಾರದವರಿಗಿತ್ತು ಈ ಪಾನ ನಿರೋಧ ಶಾಸನವನ್ನು ನಾವು ಆದಷ್ಟು ಜಾಗ್ರತೆ ದೇಶಾದ್ಯಂತ ಜಾರಿಗೆ ತಂದು ಜಯಪ್ರದಗಳಿಸಿ ದೇಶಕ್ಕೆ ನಮ್ಮ ನೀತಿಯೇನೆಂಬುದನ್ನು ತೋರಿಸಬೇಕೆಂಬ ಒಂದು ಉತ್ಕಟ ಆಸೆ ನನಗೆ ಇದೆ. ಆದರೆ ಈ ಸಬ್‌ಜೆಕ್ಟಿಗೆ ಸಂಬಂಧಪಟ್ಟ ಚರ್ಚೆ ಮತ್ತೆ ಡಿಮ್ಯಾಂಡ್‌ಗಳ ಕಾಲದಲ್ಲಿ ಬರುತ್ತದೆ. ಆಗ ಇದರ ಬಗ್ಗೆ ಉಳಿದ ವಿಚಾರಗಳನ್ನು ತಿಳಿಸಲು ಮತ್ತೊಂದು ಅವಕಾಶವಿರುವುದರಿಂದ ನಾನಿನ್ನು ಈ ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳಲಿಚ್ಛಿಸುವುದಿಲ್ಲ. ಈ ವಿಚಾರದಲ್ಲಿ ಸರ್ಕಾರಕ್ಕೆ ಸೇವೆ ಸಲ್ಲಿಸತಕ್ಕವರಿಗೆ ಯಾವ ನೆರವನ್ನು-ಸಹಾಯವನ್ನಾಗಲಿ ನೀಡಲು ಸರ್ಕಾರದವರು ಸದಾ ಸಿದ್ಧರಾಗಿದ್ದಾರೆ. ಸರ್ಕಾರದವರು ಇಂಥ ಸಾರ್ವಜನಿಕ ಸೇವಾಧುರೀಣರ ಸಹಕಾರ ಪಡೆದು ಇದನ್ನು ಎರಡು ಕಡೆಗಳಿಂದಲೂ ತಡೆಗಟ್ಟಬೇಕೆಂಬ ಇಚ್ಛೆ ಇದೆ. Police action and Social action both must go on side-by-side and the Country must be free from these drunkards, free from law-breakers.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಪ್ರೋಹಿಬಿಷನ್ ಚೆನ್ನಾಗಿ ನಡೆಯಬೇಕು ಎಂಬುದನ್ನು ಕೆಲಮಟ್ಟಿಗೆ ನಾವೆಲ್ಲರೂ ಒಪ್ಪುತ್ತೇವೆ. ಆದರೆ ಇದನ್ನು ಪರಿಶೀಲನೆಮಾಡಿ ಹೇಗೆ ಜಾರಿಗೆ ತರಬೇಕು ಎಂಬುದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಕ ಮಾಡಿ ಪರಿಶೀಲನೆ ಮಾಡಲು ತಯಾರಾಗಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಪರಿಶೀಲನೆ ಮಾಡದೇ ಮಾಡಿಲ್ಲ. ಅನೇಕ ದಿವಸ ಚರ್ಚೆ ಮಾಡಿ ಮಾಡತಕ್ಕಂಥಾದ್ದು ಇದು ಅಲ್ಲ. Justice belated is no justice. ಆದ್ದರಿಂದ ಸಮಾಲೋಚನೆ ನಡೆಸುತ್ತೇವೆ. ಮಾನ್ಯ ಸದಸ್ಯರನ್ನು ಕರೆಸಿಕೊಂಡು ನಮ್ಮ ಸಲಹೆಗಳನ್ನು ಕೊಡುತ್ತೇವೆ. ಅಧಿಕಾರಿಗಳೂ ಸಲಹೆ ಕೊಡುತ್ತಾರೆ, ನೀವೂ ಸಲಹೆ ಕೊಡಬೇಕು. ನಾವೂ ನೀವೂ ಎಲ್ಲರೂ ಕೂಡಿ ಯೋಚನೆಮಾಡಿ ಇದನ್ನು ಯಶಸ್ವಿಯಾಗಿ ಮಾಡೋಣ.

Mr. CHAIRMAN.—The House will now adjourn and meet to-morrow at 1 P.M.

The House adjourned at Fifteen Minutes past Six of the Clock to meet again at One of the Clock on Thursday, the 30th March 1961.

WD 6403—GPB—(L A. New Br.)—500—30-12-66